ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 67 RNI Number : KNKAN/25/A2770 15-03-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :67 ರಾಯಚೂರು 15-03-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಈಗಾಗಲೇ 2-3 ಹಡಗುಗಳು ಇರಾನ್‌ನಿಂದ ಪಾಸ್ ಆಗುತ್ತಿವೆ: ಜಿ. ಪರಮೇಶ್ವರ್

ತುಮಕೂರು ,ಮಾ.14-

ಈಗಾಗಲೇ ಎರಡು-ಮೂರು ಹಡಗು ಇರಾನ್‌ನಿಂದ ಪಾಸ್ ಆಗುತ್ತಿವೆ. ಭಾರತದವರಿಗೆ ರಿಯಾಯಿತಿ ಕೊಟ್ಟಿದ್ದಾರೆ. ಹಾಗಾಗಿ, ಬೇಗ ಗ್ಯಾಸ್ ಹಾಗೂ ಪೆಟ್ರೋಲ್ ಸಮಸ್ಯೆ ಬಗೆಹರಿಯಲಿದೆ. ಯಾರಿಗೂ ಸಮಸ್ಯೆ ಆಗೋದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆಯ ಮೂಲ ಯೋಜನೆಯಂತೆ ವಡೇರಹಳ್ಳಿಯಲ್ಲೇ ಡ್ಯಾಂ ನಿರ್ಮಾಣ ಮಾಡಲಾಗುವುದು. ಇದು ವಡೇರಹಳ್ಳಿ, ತುಮಕೂರು ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗಡಿ ಭಾಗವಾಗಿದೆ. ವಡೇರಹಳ್ಳಿಯ ಎರಡೂವರೆ ಹಾಗೂ ಚಿಕ್ಕಬಳ್ಳಾಪುರದ ಗಡಿಯ ಎರಡೂವರೆ ಸೇರಿ ಒಟ್ಟು 5 ಸಾವಿರ ಎಕರೆಯಲ್ಲಿ ಬಫರ್ ಡ್ಯಾಂ ನಿರ್ಮಾಣ ಮಾಡಲಾಗುತ್ತದೆ ಎಂದರು.

ಆದರೆ, ಹಿಂದಿನ ಬಿಜೆಪಿ ಸರ್ಕಾರ ಮೂಲ ಪ್ಲಾನ್ ಬದಲಿಸಿ ಬೈರಗೊಂಡ್ಲುವಿನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿತ್ತು. ಆದರೆ, ನಮ್ಮ ಸರ್ಕಾರ ಮೂಲ ಪ್ಲಾನ್‌ನಂತೆ ವಡೇರಹಳ್ಳಿಯಲ್ಲಿ ಮಾಡಲು ಬಜೆಟ್‌ನಲ್ಲಿ



ಘೋಷಣೆ ಮಾಡಿದ್ದೇವೆ. ಸ್ಥಳೀಯರ ವಿರೋಧವಿದ್ದರೂ ಅವರನ್ನು ಕೂರಿಸಿ ಮಾತನಾಡಿಸಿ, ಸಮಸ್ಯೆ ಬಗೆಹರಿಸುತ್ತೇವೆ ಎಂದು ತಿಳಿಸಿದರು.

ಬೈರಗೊಂಡನಹಳ್ಳಿ ರೈತರು ವಿರೋಧ ವ್ಯಕ್ತಪಡಿಸಿದ್ದರಿಂದ ಈಗ ವಡೇರಹಳ್ಳಿಯಲ್ಲೇ ನಿರ್ಮಾಣ ಮಾಡಲಾಗುತ್ತದೆ. ಒಂದೂವರೆ ಟಿಎಂಸಿ ನೀರನ್ನು ಅಲ್ಲಿ ಶೇಖರಣೆ ಮಾಡಲಾಗುತ್ತದೆ. ಏನಾದರೂ ಪ್ರಯತ್ನ ಮಾಡಿ ಅವರನ್ನು ಕನ್ವಿನ್ಸ್ ಮಾಡುತ್ತೇವೆ. ಅವರಿಗೆ ಪರ್ಯಾಯವಾಗಿ ಏನಾದರೂ ಕಲ್ಪಿಸಿ ಸಮಸ್ಯೆ ಬಗೆಹರಿಸುತ್ತೇವೆ ಎಂದು ಹೇಳಿದರು.

ಒಳಮೀಸಲಾತಿ ವಿಚಾರವಾಗಿ ಮಾತನಾಡಿದ ಅವರು, ಇದೇ ತಿಂಗಳ 27ಕ್ಕೆ ಮುಖ್ಯಮಂತ್ರಿಗಳು ವಿಶೇಷ ಸಭೆ ಕರೆದಿದ್ದಾರೆ. ಬಹುಶಃ ಅವತ್ತು ಬಗೆಹರಿಯುತ್ತೆ ಅಂದುಕೊಂಡಿದ್ದೇವೆ. ಅವತ್ತು ತೀರ್ಮಾನ ಆಗುತ್ತೆ. ತೀರ್ಮಾನ ಆದ ನಂತರ ಸರ್ಕಾರ ಆದೇಶ ಹೊರಡಿಸುತ್ತೆ. ಸರ್ಕಾರದ ಆದೇಶ ಹೊರಟ ನಂತರ ನಮ್ಮ ಆಯ್ಕೆ ಪ್ರಕ್ರಿಯೆ ಶುರುವಾಗುತ್ತೆ ಎಂದು ಹೇಳಿದರು.

ನಾವು 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ. ಪೊಲೀಸ್ ಇಲಾಖೆಯಲ್ಲೇ 8 ಸಾವಿರ ಹುದ್ದೆಗಳಿವೆ. ನಾವು ಸರ್ಕಾರದ ತೀರ್ಮಾನ ಆದ ನಂತರ ತುರ್ತಾಗಿ ಆಯ್ಕೆ ಪ್ರಕ್ರಿಯೆ ಮಾಡುತ್ತೇವೆ ಎಂದು ಹೇಳಿದರು.

ತುಮಕೂರು ಜಿಲ್ಲೆಯಲ್ಲಿ ಸದ್ಯಕ್ಕೆ ಗ್ಯಾಸ್ ಸಮಸ್ಯೆ ಇಲ್ಲ. ಗೃಹ ಬಳಕೆಯ ಗ್ಯಾಸ್ ಸಮಸ್ಯೆ ಮೊದಲೇ ಇಲ್ಲ. ಅಲ್ಲೊ ಇಲ್ಲೋ ವಾಣಿಜ್ಯ ಬಳಕೆ ಸಿಲಿಂಡರ್‌ನ ಸಮಸ್ಯೆ ತಲೆದೂರಿದೆ ಎನ್ನುತ್ತಿದ್ದಾರೆ. ಆದರೆ ಡೊಮೆಸ್ಟಿಕ್ ಗ್ಯಾಸ್ ತೊಂದರೆ ಇಲ್ಲ. ಹೋಟೆಲ್‌ನವರಿಗೆಲ್ಲ ಒಂದೆರಡು ದಿನ ಸಮಸ್ಯೆ ಆಗಬಹುದು. ಹೋಲ್ಡ್ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಮುಂದಾದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ತುಮಕೂರು ಜಿಲ್ಲೆಯಲ್ಲಿ ಸದ್ಯಕ್ಕಂತೂ ನೀರಿನ ಸಮಸ್ಯೆ ಇಲ್ಲ. ಟ್ಯಾಂಕರ್‌ನಲ್ಲಿ ನೀರು ಕೊಡುವಂತಹ ಸಮಸ್ಯೆ ಇನ್ನೂ ಬಂದಿಲ್ಲ. ಈ ಬಾರಿ ಬೇಸಿಗೆ ತೀವ್ರವಾಗಿರುತ್ತೆ ಅಂತ ಹೇಳಿದ್ದಾರೆ. ಹಾಗಾಗಿ, ಮುಂದೆ ಕಂಡಿತವಾಗಿಯೂ ನೀರಿನ ಸಮಸ್ಯೆ ತಲೆದೂರಬಹುದು. ಬುಗುಡ್‌ನಹಳ್ಳಿ ಕೆರೆಯಲ್ಲಿ ಡೆಡ್ ಸ್ಟೋರೇಜ್‌ಗೆ ನೀರು ತಲುಪಿದೆ. ಹಾಗಾಗಿ, ಗೋರೂರು ಜಲಾಶಯದಿಂದ ಒಂದೂವರೆ ಟಿಎಂಸಿ ಹೇಮಾವತಿ ನೀರನ್ನು ಬಿಡುವಂತೆ ಹಾಸನ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಬಳಿ ಮನವಿ ಮಾಡಿದ್ದೇವೆ. ಆ ನೀರು ಬರುತ್ತೆ. ಬಂದರೆ ಮೇ ತಿಂಗಳಿಗೆ ಸಮಸ್ಯೆ ಇಲ್ಲ ಎಂದರು.

ಸಿದ್ದಗಂಗಾ ಮಠಕ್ಕೆ ಭೇಟಿ ಕೊಟ್ಟು, ಗದ್ದುಗೆ ದರ್ಶನ ಪಡೆದು ಶ್ರೀಗಳ ಆಶೀರ್ವಾದ ಪಡೆದಿದ್ದೇನೆ. ಸಿದ್ದಗಂಗಾ ಮಠದ ಸೇವೆ ನಮಗೆಲ್ಲ ಸ್ಪೂರ್ತಿ. ನಮ್ಮ ತಂದೆಯವರ ಕಾಲದಿಂದಲೂ ಸಿದ್ದಗಂಗಾ ಮಠಕ್ಕೆ ನಡೆದುಕೊಳ್ಳುತ್ತಿದ್ದೇವೆ ಎಂದು ಗೃಹ ಸಚಿವರು ಹೇಳಿದರು.

ರಾಜಕೀಯವಾಗಿ ಅವರು ಯಾವುದೇ ಮಾರ್ಗದರ್ಶನ ಕೊಡಲ್ಲ.

3ನೇ ಪುಟ.....

ವಿವಿಧ ಕಾಮಗಾರಿಗೆ ಎ.ವಸಂತಕುಮಾರ ಭೂಮಿ ಪೂಜೆ

ರಾಯಚೂರು,ಮಾ.14-

ನಗರದ ವಾರ್ಡ ನಂ.02 ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಭೂಮಿ ಪೂಜೆ ನೆರವೇರಿಸಿದರು.

ವಾರ್ಡ ನಂ. 02ರಲ್ಲಿ ಬರುವ ಆಶಾಪುರ ಮುಖ್ಯ ರಸ್ತೆಯಿಂದ ಎಫ್.ಸಿ.ಐ. ಕಾಂಪೌಂಡವರೆಗೆ ಸಿಸಿ ರಸ್ತೆ ನಿರ್ಮಾಣಕ್ಕೆ 50.00 ಲಕ್ಷ ರೂ ಅನುದಾನದ ಒದಗಿಸಲಾಗಿದೆ, ಅಖಿಲ್ ಅಪಾರ್ಟಮೆಂಟ್ ನಿಂದ ಏನಕ್ಲೇವ ಫೇಸ್-01 ಅಪಾಟ್ಮೆಂಟ್ ವರೆಗೆ ಸಿಸಿ ರಸ್ತೆ ನಿರ್ಮಾಣ ಕಾಮಾಗರಿಗೆ 30.00 ಲಕ್ಷ ಅಬುದಾನ ಒದಗಿಸಲಾಗಿದೆ, ಅದೇ ರೀತಿ ವಾರ್ಡಿನ ವಿಜಯನಗರ ಬಡಾವಣೆಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ 1.00 ಕೋ ರೂ ಅನುದಾನ ಒದಗಿಸಲಾಗಿದೆ ಹಾಗೂ ವಾರ್ಡಿನ ಆಫಿಸರ್ ಕಾಲೋನಿ ಯಲ್ಲಿ 2.00 ಕೋ ರೂ ಅನುದಾನದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎ.ವಸಂತಕುಮಾರ ಅವರು ರಾಯಚೂರು ನಗರವು ವೇಗವಾಗಿ ಬೆಳೆಯುತ್ತಿದ್ದು ಹಲವು ಮೂಲಭೂತ ಸೌಕರ್ಯಗಳಿಂದ ವಂಚಿತಗೊಂಡಿರುವದರಿಂದ ಕೆಕೆಆರ್.ಡಿಬಿ ಮೂಲಕ ಸಾಕಷ್ಟು ಅನುದಾನ ಒದಗಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ, ಗಿಣಮಟ್ಟದ ಕಾಮಗಾರಿಯನ್ನು ನಿರ್ವಹಿಸಬೇಕೆಂದು ಹೇಳಿದರು. ಇದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ನಗರದ ಬಹುತೇಕ ವಾರ್ಡಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ ಅಲ್ಲದೇ ನಿರಂತರ ಅಭಿವೃದ್ಧಿ



ನಡೆಸಲಾಗುತ್ತಿದೆ.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಜಯಣ್ಣ, ಬಸವರಾಜ ದರೂರು, ಮಂಚಾಲ ಭಿಮಣ್ಣ, ರಾಮಕೃಷ್ಣ ನಾಯಕ, ಅಬ್ದುಲ್

3ನೇ ಪುಟ.....

ರಾಜ್ಯದಲ್ಲಿ ಗ್ಯಾಸ್, ಡೀಸೆಲ್ ಹಾಗೂ ಪೆಟ್ರೋಲ್‌ಗೆ ಕೊರತೆ ಇಲ್ಲ : ಮಧು ಬಂಗಾರಪ್ಪ

ಶಿವಮೊಗ್ಗ ,ಮಾ.14-

ರಾಜ್ಯದಲ್ಲಿ ಗ್ಯಾಸ್, ಡೀಸೆಲ್ ಮತ್ತು ಪೆಟ್ರೋಲ್‌ಗೆ ಯಾವುದೇ ಕೊರತೆ ಇಲ್ಲ. ಎಲ್ಲಾ ಕಡೆ ಲಭ್ಯವಿದೆ ಎಂದು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧು ಬಂಗಾರಪ್ಪ ಅವರು ತಿಳಿಸಿದ್ದಾರೆ.

ನಗರದ ಗೋಪಾಲಗೌಡ ಬಡಾವಣೆಯ ನೇತಾಜಿ ವೃತ್ತದಿಂದ ಆಲ್ಕೊಳ ವೃತ್ತದವರೆಗೂ ಇರುವ 100 ಅಡಿ ರಸ್ತೆಗೆ ದಿವಂಗತ ಎಸ್. ಬಂಗಾರಪ್ಪ ಅವರ ಹೆಸರಿನ ನಾಮ ಫಲಕ ಉದ್ಘಾಟಿಸಿದರು. ನಂತರ ಗ್ಯಾಸ್ ಸಮಸ್ಯೆ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗ್ಯಾಸ್ ಕುರಿತು ಸದನದಲ್ಲಿ

3ನೇ ಪುಟ.....

ಏಪ್ರಿಲ್ ಕೊನೆಯ ವಾರದ ವರಗೆ ಕುಡಿಯುವ ಹರಿಸಲು ಮನವಿ



ಲಿಂಗಸಗೂರು,ಮಾ.14-

ರಾಜ್ಯದ ಉಪಮುಖ್ಯಮಂತ್ರಿಗಳು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶಿವಕುಮಾರ್ ರ ವರನ್ನು ಬೆಂಗಳೂರುನಲ್ಲಿ, ಬೇಟಿ ಮಾಡಿ ಅಧ್ಯಕ್ಷರಾಗಿ ಪಕ್ಷದ ಚುಕ್ಕಾನೆ ಹಿಡಿದು 6 ವರ್ಷಗಳ ಯಶಸ್ವಿವಾಗಿ ಪುರೈಸಿರುವ ಮತ್ತು ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸ್ ಕಾರ್ಯಕರ್ತರನ್ನು ಹಗಲು ಇರಲು ಕಾಪಾಡುತ್ತಿರುವ ಶಿವಕುಮಾರ್ ರವರಿಗೆ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶರಣಗೌಡ ಪಾಟೀಲ್ ಬಯ್ಯಾಪುರ ಸಾಹೇಬರು ಅಭಿನಂದನೆ ಸಲ್ಲಿಸಿದರು. ಹಾಗೂ ರೈತರ ಜೀವನಾಡಿ ಆಗಿರುವ ರಾಂಪುರ್ ನೀರಾವರಿಗೆ ಬೇಸಿಗೆಯಲ್ಲಿ ಕುಡಿವ ನೀರು ಹಾಗೂ 2ನೇ ಬೆಳೆಗೆ ಏಪ್ರಿಲ್ 25 ವರೆಗೆ ನೀರು ಬಿಡಬೇಕು ಅಂತ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹುವನ್ನಾಬಾದ್ ಶ್ರೀ ಭೀಮರಾವ್ ಪಾಟೀಲ್ ವಿಜಯಪುರ ಶ್ರೀ ಸುನಿಲ್ ಪಾಟೀಲ್ ಉಪಸ್ಥಿತರಿದ್ದರು.

ಶಿವನಗೌಡ ನಾಯಕ ವಿರುದ್ಧ ಛಲವಾದಿ ಮಹಾಸಭಾ ದೂರು ಹಿಂಪಡಿಗೆ ಒತ್ತಾಯ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯದ ಹಕ್ಕು ರಕ್ಷಣೆ ಹಿತಕಾಯದ ಮಹಾದೇವ ಸಚಿವ ಸ್ಥಾನದಿಂದ ವಜಾಕ್ಕೆ ಅಗ್ರಹ

ರಾಯಚೂರು, ಮಾ. 14-

ಮಾಜಿ ಸಚಿವರಾದ ಕೆ.ಶಿವನ ಗೌಡ ನಾಯಕ ಅವರು ಇತ್ತೀಚಿಗೆ ಚಿತ್ರದುರ್ಗಾದಲ್ಲಿ ಜರುಗಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂದೋಲನ ಸಭೆ ಯಲ್ಲಿಸಮಾಜ ಕಲ್ಯಾಣ ಸಚಿವರಾದ ಹೆಚ್.ಸಿ.ಮಹಾದೇವಪ್ಪ ಅವರು ನನ್ನ ಎದುರು ಸಿಕ್ಕರೆ ಕಪಾಳಕ್ಕೆ ಬಾರಿಸಬೇಕು ಎನ್ನುವ ಹೇಳಿಕೆಗೆ ಪ್ರಚೋದನೆ ನೀಡುತ್ತದೆ ಎಂದು ಅವರ ವಿರುದ್ಧ ದಾಖಲಿಸಿದ ಕ್ರಿಮಿನಲ್ ಪ್ರಕರಣ ಕೂಡಲೇ ಹಿಂಪಡಿಯಬೇಕು ಎಂದು ಒಳಮೀಸಲಾತಿ ಜಾರಿ ಹೋರಾಟ




ಸಮಿತಿ ಮುಖಂಡ ಎಸ್.ಮಾರೆಪ್ಪ ವಕೀಲ್ ಒತ್ತಾಯಿಸಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,

ಶಿವನಗೌಡ ನಾಯಕರ ವಿರುದ್ಧ ಛಲವಾದಿ ಮಹಾಸಭಾ ದೂರು ನೀಡಿದ್ದು ಸತ್ಯಕ್ಕೆ ವಿರುದ್ಧವಾಗಿದೆ. ಸಮಾಜಕ್ಕೆ ಅನ್ಯಾಯವಾಗಿದೆ ಎಂದು ಅವರು ಸಚಿವರು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ ಹೊರತು ಉದ್ದೇಶಪೂರ್ವಕವಾಗಿ ಅವರು ಅ ರೀತಿಯ ಹೇಳಿಕೆ ನೀಡಿಲ್ಲ ಎಂದ'ರು.ಪ.ಜಾತಿ.ಪ.ಪಂ ಸಮುದಾಯಗಳ ಹಕ್ಕುಗಳ ರಕ್ಷಣೆ ಮಾಡದ ಸಚಿವ ಮಹಾದೇವ ಅವರನ್ನು ಕೂಡಲೇ ಸಚಿವ ಸ್ಥಾನ ದಿಂದ ವಜಾಗೊಳಿಸಲು ಒತ್ತಾಯಿಸಿದರು.ಮಾಜಿ ವಿಧಾನಸಭಾ ಸದಸ್ಯರಾದ ವಿ.ಎಸ್.ಉಗ್ರಪ್ಪನವರು ಕೂಡ ಒಂದು ವಿಡಿಯೋದಲ್ಲಿ ಮತ್ತು ಪರಿಶಿಷ್ಟ ಜಾತಿಯ ಅಲೆಮಾರಿಗಳು ಕೂಡ ಸಚಿವ ಮಹಾದೇವಪ್ಪನವರ ವಿರುದ್ಧ ಮಾತನಾಡಿದ್ದಾರೆ. ಸಚಿವ ಮಹಾದೇ ವಪ್ಪ ಒಬ್ಬ ಸಾರ್ವಜನಿಕ ಅಧಿಕಾರಿ ಇವರನ್ನು ಸಕಾರಣದಿಂದ ವಿಮರ್ಶೆ ಮಾಡುವುದು ಸಾರ್ವಜನಿಕರಿಗಿರುವ ಹಕ್ಕಾಗಿದೆ. ಸ್ವಂತ ಸಮುದಾಯದ ವ್ಯಕ್ತಿ ಏನು ಮಾಡಿದರೂ ಸರಿ ಅನ್ನುವುದು ಜಾತಿವಾದಿತನವಾಗುತ್ತದೆ. ಎಷ್ಟು ಮಂದಿ ವಿರುದ್ಧ ಛಲವಾದಿ ಮಹಾಸಭಾದವರು ಕ್ರಿಮಿನಲ್ ಕೇಸು ಮಾಡಬಹುದು?ಒಂದು ಕಡೆ ಒಳ ಮೀಸಲಾತಿಗೂ ವಿರುದ್ಧ ಇನ್ನೊಂದು ಕಡೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಹೆಚ್ಚಿಸಿದ

3ನೇ ಪುಟ.....

ಯರಮರಸ್ ಕ್ಯಾಂಪ್ ಸರ್ಕಾರಿ ಪ್ರೌಢ ಶಾಲಾ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ



ರಾಯಚೂರು, ಮಾ. 14-

ನಗರದ ಯರಮರಸ್ ಕ್ಯಾಂಪಿನ ಸರ್ಕಾರಿ ಪ್ರೌಢ ಶಾಲೆಯ ಶಾಲಾ ವಾರ್ಷಿಕೋತ್ಸವ ಹಾಗೂ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಬಿಳ್ಕೋಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಎಸ್ ಡಿಎಂಸಿ ಅಧ್ಯಕ್ಷ ನರಸಿಂಹಲು, ಉಪಾಧ್ಯಕ್ಷರು ಹಾಗೂ ಶಿಕ್ಷಣ ಪ್ರೇಮಿ ಹನುಮಂತ ಎಂ ಗಡಿ, ಸದಸ್ಯರಾದ ಶಭಾನ್ ಬೇಗಂ, ಶಾಂತಮ್ಮ, ಸುಲ್ತಾನ್, ಹಾಗೂ ಶಾಲಾ ಮುಖ್ಯ ಗುರುಗಳಾದ ಕೃಷ್ಣ ಸಹಶಿಕ್ಷಕರಾದ ಸುವರ್ಣ, ಲಕ್ಷ್ಮೀ ಬಿ ದೋತ್ರಿ, ಅನಿಲ್‌ಕುಮಾರ್ ಚಂದ್ರಕಲಾ, ಅಂದಾನಯ್ಯ, ಸುಪ್ರಭಾವತಿ, ದೈಹಿಕ ಶಿಕ್ಷಕಿ ಮಮತಾ ಎಚ್, ಪ್ರದಸ ಮಾರುತಿ ಕುಮಾರ ಮಾನ್ವಿ, ಪರಿಚಾರಕರಾದ ಕಾಮೇಶ್ವರಿ ಅಡುಗೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳ ಪಾಲಕರು ಭಾಗವಹಿಸಿದ್ದರು.

ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣನವರ ಜಯಂತಿ ಸರ್ಕಾರ ಘೋಷಣೆ ಮಾಡಲಿ-ರಮೇಶ

ರಾಯಚೂರು, ಮಾ. 14-

ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಇವರ ಜಯಂತಿಯನ್ನು ರಾಜ್ಯ ಸರ್ಕಾರ ಘೋಷಣೆ ಮಾಡಬೇಕು ಹಾಗೂ ಮತ್ತು ಬೋವಿ (ವಡ್ಡರ) ಸಮುದಾಯಕ್ಕೆ ಶೇ10% ಮೀಸಲಾತಿ ನೀಡಬೇಕೆಂದು ಕರ್ನಾಟಕ ರಾಜ್ಯ ಕ್ರಾಂತಿ ವೀರ ಬೆಳವಡಿ (ವಡ್ಡರ) ಯಲ್ಲಣ್ಣ ಸಂಘದ ಮುಖಂಡ ರಮೇಶ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ಕರ್ನಾಟಕ ರಾಜ್ಯ



ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣನವರು ಸ್ವಾತಂತ್ರ ಹೋರಾಟಗಾರರಾಗಿದ್ದು, ಇವರ ಪ್ರತಿ ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಅನುಮತಿ ನೀಡಬೇಕು ಹಾಗೂ ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣನವರ ಚರಿತ್ರೆಯ ಪುಸ್ತಕಗಳನ್ನು ಗ್ರಂಥಾಲಯಗಳಲ್ಲಿ ಇಡಬೇಕೆಂದು ಮತ್ತು ಸಂಬಂಧಪಟ್ಟ ಗ್ರಂಥಾಲಯ ಸಚಿವರುಗಳಿಗೆ ಆದೇಶ ಹೊರಡಿಸಲು ಶಿಫಾರಸ್ಸು ನೀಡಬೇಕೆಂದು ಮನವಿ ಮಾಡಿದರು..

ನಾವು ಗುಡಿಯನ್ನು ಕಟ್ಟಿದವರು ವಡ್ಡರು, ಕೆರೆಯನ್ನು ಕಟ್ಟಿದವರು ವಡ್ಡರು, ಡ್ಯಾಂಗಳನ್ನು ಕಟ್ಟಿದವರು ವಡ್ಡರು, ದೇವರ ಮೂರ್ತಿಗಳನ್ನು

3ನೇ ಪುಟ.....

ದಿ.16 ಮಡಿವಾಳ ಸಮಾಜ ಎಸ್ಸಿ ಸೇರ್ಪಡೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಅಹೋರಾತ್ರಿ ಧರಣಿ

ರಾಯಚೂರು, ಮಾ.14-

ಮಡಿವಾಳ ಸಮುದಾಯದ ಬಹುದಿನಗಳ ಬೇಡಿಕೆ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡುವಂತೆ ಆಗ್ರಹಿಸಿ ಸರಕಾರ ಗಮನ ಸೆಳೆಯುವ ನಿಟ್ಟನಲ್ಲಿ ದಿ.16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಜಿಲ್ಲಾಧ್ಯಕ್ಷರಾದ ಜಂಬಣ್ಣ ಯಕ್ಲಸಪೂರು ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಮಡಿವಾಳ ಸಮಾಜದ ಆರ್ಥಿಕವಾಗಿ ಮತ್ತು ಶೈಕ್ಷಣಿಕ ತೀರಾ ಹಿಂದುಳಿದ ಸಮಾಜವಾಗಿದೆ. ಅನೇಕ ವರ್ಷ



ಗಳಿಂದ ಸಮಾಜ ಅಭಿವೃದ್ಧಿಯಿಂದ ವಂಚಿತಗೊಂಡಿದೆ. ಮೈಸೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ.ಅನ್ನಪೂರ್ಣ ಅವರು 2009 ರಲ್ಲಿ ನಡೆಸಿದ ಕುಲಶಾಸ್ತ್ರ ಅಧ್ಯಯನದ ವರದಿಯನ್ನು 2011ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದರು. ಈ ವರದಿಯು ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಶಿಫಾರಸು ಮಾಡಿತ್ತು, ಸಮಾಜದ ಅಭಿವೃದ್ದಿಗೆ ಎಂದೇ ಡಾ.ಅನ್ನಪೂರ್ಣ ಕುಲಶಾಸ್ತ್ರ ಅಧ್ಯಯನ ವರದಿ ಸಿದ್ದಪಡಿಸಲಾಗಿದೆ.ಆದರೆ ಪರಿಶಿಷ್ಟ ಜಾತಿಗೆ ತಕ್ಷಣವೇ ಅಂಗಿಕರಿಸಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಕುಲಶಾಸ್ತ್ರೀ ಅಧ್ಯಯನ ಅನುಷ್ಠಾನ ಮಾಡುವಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರ ಸಂಪೂರ್ಣ ವಿಫಲಗೊಂಡಿದೆ. ದೇಶದ 18 ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗೆ ಮಡಿವಾಳ ಸೇರ್ಪಡೆ ಮಾಡಲಾಗಿದೆ. ಹಾಗೂ ನಾಲ್ಕು ಕೇಂದ್ರ ಆಡಳಿತ ಪ್ರದೇಶದಲ್ಲಿ ಸೇರ್ಪಡೆ ಮಾಡಲಾಗಿದೆ.ಆದರೆ ರಾಜ್ಯದಲ್ಲಿ ಮಾತ್ರ ಎಸ್ಸಿ ಸೇರ್ಪಡೆ ಸಮಾಜ ಕಡೆಗಣಿಸಲಾಗಿದೆ.

3ನೇ ಪುಟ.....

ಹಿರೇಬಗನಾಳ್ ಗ್ರಾಮಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಭೇಟಿ

ಮಾಲಿನ್ಯ ಕಾರ್ಯ ಮುಂದುವರೆಸುವ ಕಾರ್ಖಾನೆಗಳನ್ನು ಶಾಶ್ವತವಾಗಿ ನಿಲ್ಲಿಸಲು ಅವಕಾಶ

ಕೊಪ್ಪಳ ಮಾ.14

ಕಾನೂನು ಅಡಿಯಲ್ಲಿ ಸ್ಥಾಪಿತವಾದ ಉದ್ಯಮವನ್ನು ಶಾಶ್ವತವಾಗಿ ನಿಲ್ಲಿಸಲು ಕಾನೂನಿನಲ್ಲಿ ಅಡ್ಡಿ ಬರುತ್ತದೆ. ಆದರೆ, ಮಾಲಿನ್ಯ ಕಾರ್ಯವನ್ನು ಮುಂದುವರೆಸುವ ಕಾರ್ಖಾನೆಗಳನ್ನು ಶಾಶ್ವತವಾಗಿ ನಿಲ್ಲಿಸಲು ಅವಕಾಶವಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಪಿ.ಎಂ.ನರೇಂದ್ರಸ್ವಾಮಿ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ್ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿನ ವಾಯು ಮಾಲಿನ್ಯ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಗ್ರಾಮದ ಕರಿಯಮ್ಮದೇವಿ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೇಂದ್ರದ ನಿಯಮದಡಿ ಕೆಲಸ ಮಾಡುವ ಸಂಸ್ಥೆಯಾಗಿದ್ದು, ನೆಲ, ಜಲ, ವಾಯು ಮಾಲಿನ್ಯವನ್ನು ನಿತ್ರಣ ಮಾಡುವುದಕ್ಕಾಗಿ ನಮ್ಮ ಮಂಡಳಿ ಸ್ಥಾಪನೆಯಾಗಿದೆ. ಬಾಧಿತ ಜನರ ಸಮಸ್ಯೆಯನ್ನು ಬಗೆಹರಿಸಲು ಹಿರೇಬಗನಾಳ್‌ಗೆ ಭೇಟಿ ನೀಡಿರುವೆ. ಈ ಗ್ರಾಮಕ್ಕೆ ಬರುವುದಕ್ಕೆ ಮುಂಚೆ ಇಲ್ಲಿನ ಸಮಸ್ಯೆಗಳ ಕುರಿತು ಮಾಧ್ಯಮಗಳ ವರದಿ, ಗ್ರಾಮಸ್ಥರ ದೂರುಗಳನ್ನು ಗಮನಿಸಿದೇನೆ. ಈ ವಿಚಾರವಾಗಿ ಕೇಂದ್ರ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ನೀಡಿರುವ ವರದಿಯನ್ನು ಸಹ ನೋಡಿದ್ದೇನೆ. ಈಗಾಗಲೇ ಹಲವಾರು ಸೂಚನೆಗಳನ್ನು ಕಾರ್ಖಾನೆಗಳಿಗೆ ನೀಡಲಾಗಿದ್ದು, ಪರಿಣಾಮಕಾರಿಯಾದ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕಿರುವುದು ಅವರ ಜವಾಬ್ದಾರಿಯಾಗಿದೆ.

ಈಗ ಅನಿವಾರ್ಯವಾದ ಪರಿಸ್ಥಿತಿಗೆ ಕಾರ್ಖಾನೆಗಳೆ ಸಮಸ್ಯೆಯನ್ನು ತಂದು ಕೊಂಡಿವೆ. ಇಂದಿನ ಈ ಭೇಟಿ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಉನ್ನತ ಅಧಿಕಾರಿಗಳ ತಂಡವು ಅನಿರೀಕ್ಷಿತವಾಗಿ ಭೇಟಿ ನೀಡಿ, ಪರಿಶೀಲನೆ ಕೈಗೊಂಡು ವರದಿ ಸಿದ್ದಪಡಿಸಲು ಇಲ್ಲಿಗೆ ಕಳುಹಿಸಲಾಗಿತ್ತು. ಈ ತಂಡವು ನನಗೆ ವರದಿ ತಲುಪಿಸಲು ಸಿದ್ಧತೆಯನ್ನು ಕೈಗೊಂಡಿದೆ. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾನೂನು ಅಡಿಯಲ್ಲಿ ಸ್ಥಾಪಿತವಾದ ಉದ್ಯಮವನ್ನು ಶಾಶ್ವತವಾಗಿ ನಿಲ್ಲಿಸಲು ಕಾನೂನಿನಲ್ಲಿ ಅಡ್ಡಿ ಬರುತ್ತದೆ. ಆದರೆ, ಮಾಲಿನ್ಯ ಕಾರ್ಯ ಮುಂದುವರೆಸಿದರೆ, ಅವುಗಳನ್ನು ಶಾಶ್ವತವಾಗಿ ನಿಲ್ಲಿಸಲು ಅವಕಾಶವಿದೆ. ಹಾಗಾಗಿ ಮಾಲಿನ್ಯ ಕಾರ್ಯವನ್ನು ಸರಿಪಡಿಸಲು ಅವರಿಗೆ ಅವಕಾಶ



ಕೊಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಈಗಾಗಲೇ ಸಂಬಂಧಿಸಿದ ಕಾರ್ಖಾನೆಗಳಿಗೆ ನೋಟೀಸ್ ನೀಡಲಾಗಿದೆ. ಇದು ಕೊನೆಯ ಅವಕಾಶವಿದ್ದು, ಸಮಸ್ಯೆಗಳನ್ನು ಸರಿಪಡಿಸಲು ಯಾವ ತಾಂತ್ರಿಕ ವಿಚಾರಗಳಿವೆ, ಅವುಗಳ ಬಗ್ಗೆ ಸಂಬಂಧಿಸಿದ ಕಾರ್ಖಾನೆಗಳು ತಾಂತ್ರಿಕ ವರದಿಯೊಂದಿಗೆ ಮುಚ್ಚಳಿಕೆ ಪತ್ರವನ್ನು ನೀಡಬೇಕು. ತಪ್ಪಿದ್ದಲ್ಲಿ ನಿಯಮಗಳಡಿ ಕಾನೂನು ಕ್ರಮ ಕೈಗೊಳ್ಳಲು ಶತಸಿದ್ದ. ಜನರ ಜೀವನದ ಜೊತೆ ಚೆಲ್ಲಾಟವಾಡಲು ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯು ಯಾರಿಗೂ ಅವಕಾಶವನ್ನು ನೀಡುವುದಿಲ್ಲ ಎಂಬ ಬದ್ಧತೆಯ ಮಾತನ್ನು ನಾನು ನಿಮ್ಮ ಮುಂದೆ ಹೇಳುತ್ತೇನೆ. ಬಾಧಿತ ಜನರ ನೋವು, ಸಂಕಷ್ಟ, ಆರೋಗ್ಯ ಮತ್ತು ಎಲ್ಲಾ ವಿಚಾರಗಳು ನಮ್ಮ ಅರಿವಿನಲ್ಲಿದ್ದು, ಮಂಡಳಿಯು ಜನಸಾಮಾನ್ಯರ ಪರವಾಗಿದೆ ಎಂದು ಹೇಳಿದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ಹಿರೇಬಗನಾಳ ಮತ್ತು ಕಾಸರಕಂಡಿ ಕುಣಿಕೇರಿ ಲಾಚನಕೇರಿ, ಕರ್ಕಿಹಳ್ಳಿ, ಚಿಕ್ಕಬಗನಾಳು ಕುಣಿಕೇರಿ ತಾಂಡ ಹಾಗೂ ಹಾಲವರ್ತಿ ಸೇರಿದಂತೆ ಮತ್ತಿತರೆ ಗ್ರಾಮಗಳಲ್ಲಿ ವಿವಿಧ ಕಂಪನಿಗಳಿಂದ ಆಗುವಂತಹ ಧೂಳಿನಿಂದ ಆಯಾ ಗ್ರಾಮದ ಜನರಿಗೆ ಮತ್ತು ಜಾನುವಾರುಗಳಿಗೆ ಜೀವನ ನಡೆಸಲು ಕಷ್ಟವಾಗುತ್ತಿದೆ. ಈ ಬಗ್ಗೆ ಗ್ರಾಮಸ್ಥರು ಅರ್ಜಿಯನ್ನು ಕೊಟ್ಟಿದ್ದಾರೆ ಮತ್ತು ಹೋರಾಟಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿನ ವಾಸ್ತವಿಕತೆಯನ್ನು ಅಧ್ಯಕ್ಷರ ಗಮನಕ್ಕೆ ತಂದು, ಅದಕ್ಕೆ ಕ್ರಮ ಕೈಗೊಳ್ಳಲು ಅವಕಾಶ ಮಾಡಿ ಕೊಡೋಣ ಎಂದರು.

ಬಾಧಿತ ಗ್ರಾಮಗಳನ್ನು ಸ್ಥಳಾಂತರ ಮಾಡಲು ಅಥವಾ ಕಂಪನಿಗಳನ್ನು ಸ್ಥಳಾಂತರ ಮಾಡಲು ಈ ಹಿಂದೆ ಮನವಿ ಮಾಡಲಾಗಿತ್ತು. ನಮ್ಮ ಭಾಗದಲ್ಲಿ 1996ರಿಂದ ಕಂಪನಿಗಳು ಬರತ್ತಾ ಇದ್ದು, 2008 ರಿಂದಲೇ ಇವುಗಳ ವಿರೋಧ ಆಗುತ್ತಿದೆ. ಇವತ್ತು ನಮ್ಮ ಭಾಗದಲ್ಲಿ ಸುಮಾರು 35 ಕ್ಕೂ ಹೆಚ್ಚು ಕಾರ್ಖಾನೆಗಳು ಇದ್ದು, ಅದರಲ್ಲಿ ಕೆಲವು ದೂಳು ಮುಕ್ತ ಕಾರ್ಖಾನೆಗಳಿವೆ. ಇನ್ನುಳಿದ ಕಾರ್ಖಾನೆಗಳು ದೂಳನ್ನು ಹೋಗಲಾಡಿಸಲು ಯಾವುದೇ ಕ್ರಮ ವಹಿಸುತ್ತಿಲ್ಲ. ಹಾಗಾಗಿ ಜನ ಜಾನುವಾರುಗಳ ಆರೋಗ್ಯದ ಮೇಲೆ ಮತ್ತು ಕೃಷಿ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಗ್ರಾಮಸ್ಥರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ಉದ್ದೇಶದಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು ಇಂದು ಭೇಟಿ ನೀಡಿದ್ದಾರೆ. ಎಲ್ಲಾ ಗ್ರಾಮಗಳನ್ನು ದೂಳು ಮುಕ್ತ ಗ್ರಾಮ ಮಾಡುವುದೇ ನಮ್ಮ ಧ್ಯೇಯವಾಗಿದೆ ಎಂದು ಹೇಳಿದರು.

ಮಾಜಿ ಸಂಸದ ಕರಡಿ ಸಂಗಣ್ಣ ಅವರು ಮಾತನಾಡಿ, ಕಾರ್ಖಾನೆಗಳು ಹೊರಸೂಸುವ ಹೊಗೆಯಿಂದ ಹಿರೇಬಗನಾಳ ಮತ್ತು ಇತರೆ ಗ್ರಾಮಗಳ ಸಾರ್ವಜನಿಕರು ಸುಮಾರು ದಿನಗಳಿಂದ ಸಮಸ್ಯೆಯನ್ನು ಎದುರಿಸಿಕೊಂಡು ಬಂದಿದ್ದಾರೆ. ಇದು ಒಂದು ನಿರಂತ ಸಮಸ್ಯೆ ಆಗಿದೆ. ಕಾರ್ಖಾನೆಗಳು ತಮ್ಮ ಲಾಭಕೋಸ್ಕರ ಜನರ ಬದುಕಿಗೆ ಮತ್ತು ಮಕ್ಕಳ ಭವಿಷ್ಯಕ್ಕೆ ಸಮಸ್ಯೆಯಾಗಬಾರದು. ಕಾರ್ಖಾನೆಯ ಧೂಳಿನಿಂದ ಪ್ರಾಣಿಗಳ ಮೇಲೆಯೂ ಪರಿಣಾಮ ಬೀರುತ್ತಿದೆ. ಗಾಳಿಯಲ್ಲಿ ತೊಂದರೆ ಆಗುತ್ತಿದೆ. ನೀರಿನಲ್ಲಿ ತೊಂದರೆ ಆಗುತ್ತಿದೆ ಎಂದರು.

ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಮಾತನಾಡಿ, ಜಿಲ್ಲೆಯ ಹಿರೇಬಗನಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೆಲ, ಜಲ ಮತ್ತು ವಾಯು ಮಾಲಿನ್ಯದ ಪರಿಣಾಮಗಳ ಕುರಿತು ಪ್ರಾಥಮಿಕ ಸಮೀಕ್ಷೆ ನಡೆಸಲಾಗಿದ್ದು, ಜನರ ಆರೋಗ್ಯ ಮತ್ತು ಕೃಷಿ ಉತ್ಪಾದನೆ ಮೇಲೆ ಪರಿಣಾಮಗಳು ಕಂಡು ಬಂದಿರುತ್ತದೆ. ಗ್ರಾಮಸ್ಥರು ಹಾಗೂ ಹೋರಾಟಗಾರರು ನೀಡಿದ ಮಾಹಿತಿಯ ಆಧಾರದ ಮೇಲೆ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದೆ. ಈ ವೇಳೆ ಮಾಲಿನ್ಯದಿಂದ ಜನರು ಮತ್ತು ಜಾನುವಾರುಗಳ ಆರೋಗ್ಯದ ಮೇಲೆ, ಕೃಷಿ ಹಾಗೂ ತೋಟಗಾರಿಕೆ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಮನದಟ್ಟುಗೊಳಿಸಲಾಗಿದೆ ಎಂದು ಅವರು ಹೇಳಿದರು.

ಹಿರೇಬಗನಾಳ ಗ್ರಾಮದಲ್ಲಿ ಆರೋಗ್ಯ ಸರ್ವೆ ಹಾಗೂ ಸ್ಕಿನಿಂಗ್ ಕಾರ್ಯ ನಡೆಸಲಾಗಿದ್ದು, ಉಳಿದ ಗ್ರಾಮಗಳಲ್ಲಿ ಸಹ ಆರೋಗ್ಯ ಸಮೀಕ್ಷೆ ಪ್ರಾರಂಭಿಸಲಾಗಿದೆ. ಈ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ಸರ್ಕಾರದ ಮೂಲಕ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗೆ ಮನವಿ ಕಳುಹಿಸಲಾಗಿದೆ. ಹಿರೇಬಗನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಸಮೀಕ್ಷೆಯಲ್ಲಿ ಸುಮಾರು 122 ಜನರಿಗೆ ಮೇಲ್ಶಾಸಕೋಶ ಸಂಬಂಧಿತ ಕಾಯಿಲೆಗಳು, 49 ಜನರಿಗೆ ಚರ್ಮ ರೋಗ, 18 ಜನರಿಗೆ ಕ್ಯಾಟ್ರಾಕ್ಟಿವ್, 48 ಜನರಿಗೆ ಕಣ್ಣಿನ ಸಮಸ್ಯೆಗಳು, 78 ಜನರಿಗೆ ಮೊಣಕಾಲು ನೋವು, 29 ಜನರಿಗೆ ಟಿಬಿ, 3 ಜನರಿಗೆ ಸ್ಟ್ರೋಕ್, 1 ಕ್ಯಾನ್ಸರ್ ಹಾಗೂ ಪ್ರೈಮರಿ ಇನ್ಫರ್ಟಿಲಿಟಿ ಪ್ರಕರಣ ಪತ್ತೆಯಾಗಿರುವುದು ಗಮನಕ್ಕೆ ಬಂದಿದೆ ಎಂದರು.

ಕೃಷಿ ಕ್ಷೇತ್ರದಲ್ಲಿಯೂ ಪರಿಣಾಮ ಕಂಡು ಬಂದಿದ್ದು, ಬೆಳೆ ಕಾಟಾವು ಪ್ರಯೋಗದಲ್ಲಿ ಸುಮಾರು 40 ರಿಂದ 50 ಶೇಕಡಾ ಇಳುವರಿ ಕಡಿಮೆಯಾಗಿರುವುದು ತಿಳಿದು ಬಂದಿದೆ. ಪಪಾಯ ಬೆಳೆಗಳಲ್ಲಿ ಮೇಲೆ ಕಪ್ಪಿ ಚುಕ್ಕೆಗಳು, ಈರಳ್ಳಿಗಳ ಮೇಲೆ ಬೂದು ಬರುವಂತಹ ಲಕ್ಷಣಗಳು ಕಂಡುಬಂದಿದ್ದು, ಇದರಿಂದ ಇಳುವರಿ ಕುಸಿತವಾಗಿದೆ. ಈ ಸಂಬಂಧ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಯನ ನಡೆಸಿ, ತಾತ್ಕಾಲಿಕ (ಖಜಟ್ಟತಿ ಖಟ್ಟಿಇ) ಮತ್ತು ದೀರ್ಘಕಾಲಿಕ (ಔಟ್ಟಜ ಖಟ್ಟಿಇ) ಕ್ರಮಗಳ ಬಗ್ಗೆ ಸೂಚನೆ ನೀಡಿದೆ. ವಿಶೇಷವಾಗಿ ಸಾರಿಗೆ ಮೂಲಕ ಉಂಟಾಗುವ ಮಾಲಿನ್ಯವನ್ನು ಕಡಿಮೆ ಮಾಡುವ ಅಗತ್ಯವಿದೆ ಎಂದು ತಿಳಿಸಿದರು.

ಹೋರಾಟಗಾರರಾದ ಡಾ. ಅಲ್ಲಮಪ್ರಭು ಬಟ್ಟದೂರು ಅವರು ಮಾತನಾಡಿ, ಹಿರೇಬಗನಾಳ, ಕಾಸನಕಂಡಿ, ಸೇರಿದಂತೆ ಇಪ್ಪತ್ತು ಗ್ರಾಮಗಳ ಸಮಸ್ಯೆ ಒಂದೆ ಇದೆ. ಈ ಇಪ್ಪತ್ತು ಗ್ರಾಮದ ಪರಿಸರ ಸರಿಯಾಗಬೇಕು. ಇಂಡಿಯನ್ ಮೆಡಿಕಲ್ ಕೌನ್ಸಿಲ್ ನಿಂದ ಇಲ್ಲಿನ ಜನರ ಆರೋಗ್ಯ ತಪಾಸಣೆ ಸರ್ವೆ ಹಾಗಬೇಕು. ತಜ್ಞಾ ವಿಜ್ಞಾನಗಳಿಂದ ಪರಿಸರದ ಸರ್ವೆ ಆಗಬೇಕು ಎಂದು ವಿವರವಾಗಿ ಮಾತನಾಡಿದರು.

ಇದೇ ವೇಳೆ ಹಿರೇಬಗನಾಳ ಗ್ರಾಮಸ್ಥರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಬಳಿ, ತಮ್ಮ ಸಮಸ್ಯೆಗಳ ಅಹವಾಲುಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಕೃಷ್ಣಮೂರ್ತಿ ಸೇರಿದಂತೆ ಜಿಲ್ಲೆಯ ಇತರೆ ಜನಪ್ರತಿನಿಧಿಗಳು, ಕೊಪ್ಪಳ ಜಿಲ್ಲೆಯ ರೈತಪರ ಮತ್ತು ಪರಿಸರ ಹಿತ ರಕ್ಷಣಾ ಹೋರಾಟ ಸಮಿತಿಗಳು ಹಾಗೂ ಹಿರೇಬಗನಾಳ ಗ್ರಾಮಸ್ಥರು, ಮಹಿಳೆಯರು ಉಪಸ್ಥಿತರಿದ್ದರು.

ಮಹಿಳೆಯರು ಪುರುಷರಷ್ಟೇ ಸಮಾನರು-ಕೆ.ಇ.ಚಿದಾನಂದಪ್ಪ



ಬಳ್ಳಾರಿ,ಮಾ.14-

ಮಹಿಳೆಯರು ಕೂಡ ಪುರುಷರಷ್ಟೇ ಸಮಾನರು. ಮನೆಯ ಯಜಮಾನಿಕೆಯಿಂದ ಹಿಡಿದು ನಮ್ಮ ಭಾರತದಲ್ಲಿ ಹಲವು ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ರುವ ಮಹಿಳೆಯರ ಪಾತ್ರ ಅತ್ಯುತ್ತಮವಾದದ್ದು ಎಂದು ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು.

ಕುರುಗೋಡು ತಾಲ್ಲೂಕು ಪಂಚಾ ಯತ್ ವತಿಯಿಂದ ಕುರುಗೋಡು ಪಟ್ಟಣದ ರೈತ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಪಂಚ ಗ್ಯಾರಂಟಿ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಇದರಿಂದ ಪ್ರತಿಮನೆಯ ಯಜಮಾನಿಯು ಸ್ವಾವಲಂಬಿ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಸವನ ಗೌಡ ಅವರು ಮಾತನಾಡಿ, ಇಂದಿನ ಆಧುನಿಕ ಸಮಾಜದಲ್ಲಿ ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬಂದು ಹಲವಾರು ರಂಗದಲ್ಲಿ ತಮ್ಮದೇ ಆದ ಪ್ರತಿಭೆಯ ಜೊತೆಗೆ ಸ್ಪರ್ಧಾತ್ಮಕ ಯುಗದಲ್ಲಿ ಕೂಡ ಪ್ರಬಲ ಪೈಪೋಟಿ ನೀಡುತ್ತಿರುವುದು ಸಂತೋಷದಾಯಕ ವಿಷಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಕುರುಗೋಡು ತಾಲ್ಲೂಕು ಪಂಚಾ ಯತ್ ನ ಕಾರ್ಯನಿರ್ವಾಹಕ ಅಧಿಕಾರಿ ನಿರ್ಮಲಾ ಕೆ.ವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳೆಯರು ಸದೃಢರಾಗಬೇಕು. ಸಮಾಜದಲ್ಲಿ ತಮ್ಮದೇ ಛಾಪು ಮೂಡಿಸಬೇಕು ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿ ಹೋಗಲಾಡಿಸುವಲ್ಲಿ ಹಾಗೂ ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಮಹಿಳೆಯ ಪಾತ್ರ ಬಹುಮುಖ್ಯವಾಗಿದೆ ಎಂದು ಒತ್ತಿ ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಶಿವರಾಮ ರೆಡ್ಡಿ, ಪಂಚಾಯತ್ ರಾಜ್ ವಿಭಾಗದ ಸಹಾಯಕ ನಿರ್ದೇಶಕ ರೇಣುಕಚಾರ್ಯ ಸ್ವಾಮಿ ಸೇರಿದಂತೆ ತಾಲ್ಲೂಕಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಜಯಲಕ್ಷ್ಮಿ, ತಸ್ಲೀಮಾ ಬಾನು, ರಮಾಲಿ, ತಿಮ್ಮಪ್ಪ, ದೇವರಾಜ್, ಪ್ರಭಾಕರ್ ರೆಡ್ಡಿ ಮತ್ತು ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಸದಸ್ಯರು, ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು, ವಿವಿಧ ಸ್ವಸಹಾಯ ಸಂಘದ ಅಧ್ಯಕ್ಷರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ತಾಪಂ ಅಧಿಕಾರಿ-ಸಿಬ್ಬಂದಿ ವರ್ಗ, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

17 ರಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಬಾಗಲಕೋಟೆ ,ಮಾ.14-

ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಮಾರ್ಚ 17 ರಂದು ಬೆಳಿಗ್ಗೆ 9 ರಿಂದ ಸಂಜೆ 5 ವರೆಗೆ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ-2026 ಹಮ್ಮಿಕೊಳ್ಳಲಾಗುತ್ತಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಉದ್ಯೋಗ ಮೇಳದ ಪ್ರಚಾರ ಪೋಸ್ಟರಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಜಿಲ್ಲೆಯ ಉದ್ಯೋಗಾಕಾಂಕ್ಷಿಗಳಿಗೆ ಸುವರ್ಣಾವಕಾಶ ಒದಗಿಸುವ ಉದ್ದೇಶದಿಂದ ಜಿಲ್ಲಾ ಪಂಚಾಯತ ವತಿಯಿಂದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗುತ್ತಿದೆ. ಮೇಳದಲ್ಲಿ ವಿವಿಧ ಕ್ಷೇತ್ರದ 50 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.



ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಮೇಳದಲ್ಲಿ ಉತ್ಪಾದನಾ ವಲಯ, ಬ್ಯಾಂಕಿಂಗ್ ಕ್ಷೇತ್ರ, ಮಾರಾಟ, ಮಾಹಿತಿ ತಂತ್ರಜ್ಞಾನ, ಗಾರ್ಮೆಂಟ್ಸ್ , ಸೇವಾ ಹಾಗೂ ಪ್ರವಾಸೋದ್ಯಮ, ಹಣಕಾಸು ಮತ್ತು ನಿರ್ವಹಣಾ ಕ್ಷೇತ್ರ ಸೇರಿದಂತೆ ಹಲವಾರು ವಿಭಾಗಗಳಲ್ಲಿ ಉದ್ಯೋಗ ಅವಕಾಶಗಳಿವೆ. ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವೀಧರರಿಗೆ ನೂರಾರು ಅವಕಾಶಗಳು ಸೇರಿದಂತೆ ವಿವಿಧ ವಿದ್ಯಾರ್ಹತೆಗಳಿಗೆ ಉದ್ಯೋಗ ಅವಕಾಶವಿರುತ್ತದೆ ಎಂದರು.

ಕೋಟೆನಾಡಿನ ಯುವಜನತೆಗೆ ಉದ್ಯೋಗ ಅವಕಾಶ ಸಿಗುವ ನಿಟ್ಟನಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, 18 ವರ್ಷ ಮೇಲ್ಪಟ್ಟ ಯಾವುದೇ ವಿದ್ಯಾರ್ಹತೆಯ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದ ಮೂಲಕ ಉದ್ಯೋಗ ಪಡೆಯಬಹುದು. ಆಸಕ್ತರು ಗೂಗಲ್ ಫಾರ್ಮ್ https://forms.gle/BA4W3MekEyscP61H7 ಮೂಲಕ ಪೂರ್ವ ನೋಂದಣಿ ಮಾಡಿಕೊಳ್ಳಬಹುದಾಗಿದೆ. ನೋಂದಣಿ ಮಾಡಿದವರು ಮೇಳದಿನದಂದು ನೇರವಾಗಿ ಹಾಜರಾಗಿ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾಧಿ ಕಾರಿ ಸಂಗಪ್ಪ, ಯುಕೆಪಿ ಮಹಾವ್ಯವಸ್ಥಾಪಕ ಗಜಾನನ ಬಾಲೆ, ಜಿಲ್ಲಾ ಕೌಶಲ್ಯಾಧಿಕಾರಿ ಹಿರೇಮಠ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಎಚ್‌ಪಿವಿ ಲಸಿಕಾ ಅಭಿಯಾನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ

ಪ್ರತಿ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ಕಡ್ಡಾಯವಾಗಿ ಹಾಕಿಸಿ: ಡಾ.ಲಿಂಗರಾಜು ಟಿ.



ಕೊಪ್ಪಳ ಮಾ.14-

ಸಾರ್ವಜನಿಕರು ತಮ್ಮ ಕುಟುಂಬದ 14 ವರ್ಷದ ಹೆಣ್ಣು ಮಕ್ಕಳಿಗೆ ತಪ್ಪದೇ ಎಚ್‌ಪಿವಿ ಲಸಿಕೆಯನ್ನು ಹಾಕಿಸಿ ಜಿಲ್ಲೆಯನ್ನು ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಸಹಕರಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಲಿಂಗರಾಜು ಟಿ. ಅವರು ಹೇಳಿದರು.

ಜಿಲ್ಲೆಯಲ್ಲಿ ಇಂದಿನಿಂದ ಹಮ್ಮಿಕೊಂಡಿರುವ ಎಚ್‌ಪಿವಿ ಲಸಿಕಾ ಅಭಿಯಾನದ ಅಂಗವಾಗಿ ಅವರು ಶುಕ್ರವಾರದಂದು ಮುನಿರಾಬಾದ್‌ನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಮುನಿರಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಹ್ಯೂಮನ್ ಪ್ಯಾಪಿ ಲೋಮಾ ವೈರಸ್(ಎಚ್‌ಪಿವಿ) ಲಸಿಕಾ ಅಭಿಯಾನದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಇಂದಿನಿಂದ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಎಚ್‌ಪಿವಿ ಲಸಿಕೆ ನೀಡುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದ್ದು, ಇದರ ಉದ್ದೇಶ ಹೆಣ್ಣುಮಕ್ಕಳಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವುದಾಗಿದೆ. ಇದು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಜಾಗತಿಕವಾಗಿಯೂ ಸಾರ್ವಜನಿಕರ ಆರೋಗ್ಯದ ಒಂದು ಮಹತ್ವಪೂರ್ಣ ಅಭಿಯಾನವಾಗಿದೆ. ಗರ್ಭಕಂಠದ ಕ್ಯಾನ್ಸರ್ ಹ್ಯೂಮನ್ ಪ್ಯಾಪಿಲೋಮಾ ವೈರಸ್‌ನಿಂದ ಉಂಟಾಗುತ್ತದೆ. ಈ ಖಾಯಿಲೆ ತಡೆಗಟ್ಟಲು ಏಕೈಕ ಮಾರ್ಗ ಈ ಎಚ್‌ಪಿವಿ ಲಸಿಕೆ ಪಡೆಯುವುದಾಗಿದೆ. 14 ವರ್ಷದ ವಯಸ್ಸಿನ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕಾ ಅಭಿಯಾನವನ್ನು ದೇಶಾದ್ಯಂತ ಹಮ್ಮಿಕೊಂಡಿದೆ. ಈ ಅಭಿಯಾನದಡಿ ನಮ್ಮ ಕೊಪ್ಪಳ ಜಿಲ್ಲೆಯಾದ್ಯಂತ 14 ವರ್ಷದ ವಯಸ್ಸಿನ ಎಲ್ಲಾ ಅರ್ಹ ಹೆಣ್ಣುಮಕ್ಕಳಿಗೆ ಸರ್ಕಾರಿ ಆರೋಗ್ಯ ಸಂಸ್ಥೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ತಾಲೂಕಾ ಆಸ್ಪತ್ರೆಗಳಲ್ಲಿ ಮತ್ತು ಜಿಲ್ಲಾ ಆಸ್ಪತ್ರೆ (ತಾಯಿ- ಮಕ್ಕಳ ಆಸ್ಪತ್ರೆ) ಯಲ್ಲಿ ಈ ಲಸಿಕೆಯನ್ನು ನೀಡಲಾಗುತ್ತದೆ. ಒಂದು ಡೋಸ್ ಗಾರ್ಡಸಿಲ್-4 ಎಚ್‌ಪಿವಿ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದ್ದು, ಸಾರ್ವಜನಿಕರು ತಮ್ಮ 14 ವರ್ಷದ ಹೆಣ್ಣುಮಕ್ಕಳಿಗೆ ತಪ್ಪದೇ ಈ ಲಸಿಕೆ ಹಾಕಿಸಿ, ಗರ್ಭಕಂಠದ ಕ್ಯಾನ್ಸರ್ ಮುಕ್ತ ಕೊಪ್ಪಳ ಜಿಲ್ಲೆಯನ್ನಾಗಿ ಮಾಡಲು ಸಹಕರಿಸಬೇಕೆಂದು ತಿಳಿಸಿದರು.

ಜಿಲ್ಲಾ ಆರ್.ಸಿ.ಹೆಚ್ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪ್ರಕಾಶ ವಿ. ಮಾತನಾಡಿ, ಹೆಣ್ಣುಮಕ್ಕಳ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಅದರಲ್ಲೂ ಹದಿ-ಹರೆಯದ ಹೆಣ್ಣುಮಕ್ಕಳ ಆರೋಗ್ಯ ರಕ್ಷಣೆ ಪ್ರಮುಖವಾಗಿದೆ. ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಈ ಎಚ್‌ಪಿವಿ ಲಸಿಕೆ ಮಹತ್ವದ್ದಾಗಿದೆ. ಈ ಕ್ಯಾನ್ಸರ್ ಮುಕ್ತ ನಾಳೆಗಾಗಿ ನಾವೆಲ್ಲರೂ ಎಚ್‌ಪಿವಿ ಲಸಿಕೆಯನ್ನು ಅರ್ಹ ಬಾಲಕಿಯರಿಗೆ ನೀಡಿ, ಆರೋ ಗ್ಯವಂತ ಸಮಾಜವನ್ನು ನಿರ್ಮಾಣ ಮಾಡಬೇಕು. ಇದು ಸುರಕ್ಷಿತ ಲಸಿಕೆಯಾಗಿದ್ದು, ಯಾವುದೇ ತೊಂದರೆ ಉಂಟುಮಾಡುವುದಿಲ್ಲ. ಸಾರ್ವಜನಿಕರು ಈ ಲಸಿಕಾ ಅಭಿಯಾನದ ಸದುಪಯೋಗ ಪಡೆದುಕೊಂಡು, ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಂತೆ ಕರೆ ನೀಡಿದರು. ನಂತರ 14 ವರ್ಷದ ಹೆಣ್ಣುಮಕ್ಕಳಿಗೆ ಲಸಿಕೆ ನೀಡಿ, ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಗ್ಯಾಸ್ ಸಿಲಿಂಡರ್ ಬುಕಿಂಗ್‌ನಲ್ಲಿ ತಾಂತ್ರಿಕ ವ್ಯತ್ಯಯ; ಆತಂಕ ಪಡುವ ಅಗತ್ಯವಿಲ್ಲ- ಡಿಸಿ ನಾಗೇಂದ್ರ ಪ್ರಸಾದ್.ಕೆ

ಬಳ್ಳಾರಿ,ಮಾ.14-

ಇತ್ತೀಚಿನ ದಿನಗಳಲ್ಲಿ ಅಂತರ ರಾಷ್ಟ್ರೀಯ ಇಂಧನ ಮಾರುಕಟ್ಟೆಯಲ್ಲಿ ಉಂಟಾಗಿರುವ ಬೆಲೆ ಏರಿಳಿತ ಹಾಗೂ ಎಲ್.ಪಿ.ಜಿ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಅಡುಗೆ ಅನಿಲ ವಿತರಣಾ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳಾಗಿವೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಮುಖ್ಯವಾಗಿ ತಾಂತ್ರಿಕ ಕಾರಣಗಳಿಂದಾಗಿ ಗ್ಯಾಸ್ ಬುಕಿಂಗ್ ಮಾಡುವ ಸಮಯದಲ್ಲಿ '' ಸಮಸ್ಯೆ ಎದುರಾಗುತ್ತಿದೆ. ತಾಂತ್ರಿಕ ದೋಷದಿಂದಾಗಿ ಗ್ಯಾಸ್ ಬುಕಿಂಗ್ ತಕ್ಷಣಕ್ಕೆ ಸಾಧ್ಯವಾಗದಿದ್ದರೂ, ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ. ಸರಬರಾಜಿನ ಲಭ್ಯತೆಗೆ ಅನುಗುಣವಾಗಿ ಸಿಲಿಂಡರ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಎರಡು ಸಿಲಿಂಡರ್ ಹೊಂದಿ ರುವ ಗ್ರಾಹಕರು ಯಾವುದೇ ಆತಂಕ ಒಳಗಾಗಬಾರದು ಹಾಗೂ ಏಕ ಸಿಲಿಂಡರ್ ಇದ್ದವರಿಗೆ ಆದ್ಯತೆ ಮೇಲೆ ಸಿಲಿಂಡರ್ ಪೂರೈಕೆಗೆ ಕ್ರಮ ವಹಿಸಲಾಗುತ್ತಿದೆ ಹಾಗೂ ಎಂದಿನಂತೆ ಹೊವಮ್‌ಡೆಲಿವರಿ ಮೂಲಕ ಮನೆಗಳಿಗೆ ಸಿಲಿಂಡರ್ ಒದಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಗೃಹ ಬಳಕೆಯ ಸಿಲಿಂಡರ್‌ಗಳನ್ನು ಒಮ್ಮೆ ಬುಕ್ ಮಾಡಿದ ನಂತರ, ಮುಂದಿನ ಬುಕಿಂಗ್ ಮಾಡಲು ಕನಿಷ್ಠ 25 ದಿನಗಳ ಕಾಲಾವಕಾಶ ನೀಡಲಾಗಿದೆ. ಸಾರ್ವಜನಿಕರು ಹಾಗೂ ಗ್ರಾಹಕ ಸಂಘ ಸಂಸ್ಥೆಗಳು



ಅಡುಗೆ ಅನಿಲವನ್ನು ಮಿತವಾಗಿ ಬಳಸಬೇಕು. ಹೋಟೆಲ್ ಹಾಗೂ ಇನ್ನಿತರ ಕೈಗಾರಿಕೆಗಳಲ್ಲಿ ಜೈವಿಕ ಇಂಧನ, ಸೋಲಾರ್ ಅಥವಾ ವಿದ್ಯುತ್ ಶಕ್ತಿಯನ್ನು ಪರ್ಯಾಯವಾಗಿ ಬಳಸಲು ಉತ್ತೇಜಿಸಲಾಗುತ್ತಿದೆ ಎಂದಿದ್ದಾರೆ. ದೂರು ನೀಡಲು ಸಹಾಯ ವಾಣಿ: ಗ್ಯಾಸ್ ವಿತರಣೆಯಲ್ಲಿ ಅಕ್ರಮ ಎಸಗುವುದು, ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಅಥವಾ ಅನಗತ್ಯ ವಿಳಂಬ ಮಾಡುತ್ತಿರುವುದು ಕಂಡುಬಂದಲ್ಲಿ ಸಾರ್ವಜನಿಕರು ತಕ್ಷಣವೇ ಈ ಕೆಳಗಿನ ಸಂಖ್ಯೆಗಳಿಗೆ ದೂರು ನೀಡಬಹುದು.

ತುರ್ತು ಸಂಖ್ಯೆ: 112 ಸಹಾಯವಾಣಿ: 1077 ದೂರವಾಣಿ ಸಂಖ್ಯೆ: 08392277100

ಸಿಲಿಂಡರ್‌ಗಳ ಅಕ್ರಮ ಸಂಗ್ರಹಣೆ, ಕಾಳಸಂತೆಯಲ್ಲಿ ಮಾರಾಟ ಅಥವಾ ಸಾಗಾಣಿಕೆ ಮಾಡುವುದು ಕಾನೂನುಬಾಹಿರವಾಗಿದ್ದು, ಇಂತಹ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಎಚ್ಚರಿಸಿದ್ದಾರೆ.



ಜಿಲ್ಲಾ ಮಟ್ಟದ ಹೆಚ್.ಪಿ.ವಿ. ಲಸಿಕೆ ನೀಡುವ ಅಭಿಯಾನಕ್ಕೆ ಚಾಲನೆ

ಕಲಬುರಗಿ,ಮಾ.14-

ಕಲಬುರಗಿ ನಗರ ಆರೋಗ್ಯ ಕೇಂದ್ರ ICDS ದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾದ ಜಿಲ್ಲಾ ಮಟ್ಟದ ಹೆಚ್.ಪಿ.ವಿ. (HPV)ಲಸಿಕೆ ನೀಡುವ ಅಭಿಯಾನಕ್ಕೆ ಕಲಬುರಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಶರಣಬಸಪ್ಪ ಕ್ಯಾತನಾಳ ಅವರು ಚಾಲನೆ ನೀಡಿದರು.

ನಂತರ ಅವರು ಮಾತನಾಡಿ, 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ ನಿರೋಧಕ ಲಸಿಕೆಯಾದ ಹೆಚ್.ಪಿ.ವಿ. (HPV)ಲಸಿಕೆಯನ್ನು ಕಲಬುರಗಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಆಸ್ಪತ್ರೆ (ಜಿಮ್ಸ್) ಕಲಬುರಗಿ ಹಾಗೂ ಜಿಲ್ಲೆಯ ಎಲ್ಲಾ ತಾಲೂಕಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪ್ರತಿ ದಿವಸ ಮತ್ತು ಪ್ರತಿ ಬುಧವಾರ ಮತ್ತು ಶುಕ್ರವಾರ ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ನಗರ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ.

ಭಾರತೀಯ ಮಹಿಳೆಯರಲ್ಲಿ ಕಂಡು ಬರುವ ಕ್ಯಾನ್ಸರಗಳಲ್ಲಿ ಗರ್ಭಕಂಠದ ಕ್ಯಾನ್ಸರ್ 2ನೇ ಸ್ಥಾನದಲ್ಲಿದೆ. ಇದನ್ನು ತಡೆಗಟ್ಟಲು ಭಾರತ ಸರ್ಕಾರ ಹಾಗೂ ನಮ್ಮ ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟರುವ ಪ್ರಯುಕ್ತ ಎಲ್ಲಾ 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ॥ ಸಿದ್ರಾಮಪ್ಪ ಪಾಟೀಲ್ ಅವರು ಮಾತನಾಡಿ, ಹೆಚ್.ಪಿ.ವಿ. (HPV) ಎಂದರೆ 'ಹ್ಯೂಮನ್ ಪ್ಯಾಪಿಲೋಮ್ ವೈರಸ್'. ಇದು ಜನನಾಂಗದ ಸೋಂಕುಗಳಿಗೆ ಕಾರಣವಾಗುವ ಒಂದು ಸಾಮಾನ್ಯ ವೈರಸ್. ಮಹಿಳೆಯರಲ್ಲಿ ಕಂಡು ಬರುವ ಗರ್ಭಕಂಠದ ಕ್ಯಾನ್ಸರ್ ಹೆಚ್ಚಾಗಿ ಇದೇ ವೈರಸ್ ಕಾರಣವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿ.ಸಿ.ಟಿ. (CCT) ಕಾರ್ಯಕ್ರಮ ನಿಯಂತ್ರಣಾ ಅಧಿಕಾರಿ ಡಾ॥ ವಿವೇಕಾನಂದ ರೆಡ್ಡಿ, UGC ಕೌನ್ಸಿಲ್ ಸದಸ್ಯ ಡಾ॥ ಸುಧಾ ಹಾಲಕಾಯಿ, ತಾಲೂಕಾ ಆರೋಗ್ಯ ಅಧಿಕಾರಿ ಡಾ॥ ಮಾರುತಿ ಕಾಂಬಳೆ ಕಲಬುರಗಿ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವಿಜಯಕುಮಾರ ಜಮಖಂಡಿ, ಕಲಬುರಗಿ (ಐಸಿಡಿಎಸ್) ICDS ನಗರ ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ॥ ವೀಣಾ ಕಾಳಾಪೂರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕಾ ಮಟ್ಟದ ಅಧಿಕಾರಿಗಳು, ನಗರ ಆರೋಗ್ಯ ಕೇಂದ್ರ (ಐಸಿಡಿಎಸ್) ICDS ಕಲಬುರಗಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, 14 ವರ್ಷದಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕ್ರಾಂತಿವೀರ ಬೆಳವಡಿ ವಡ್ಡರ ಯಲ್ಲಣ್ಣನವರ ಜಯಂತಿ ಸರ್ಕಾರ ಘೋಷಣೆ ಮಾಡಲಿ-ರಮೇಶ

ಕೆತ್ತಿದವರು ವಡ್ಡರು, ಈ ಎಲ್ಲಾ ಮಾಡಿದ ನಮ್ಮಗೆ ಸರ್ಕಾರವು ನಮಗೆ ಅನ್ಯಾಯ ಮಾಡುತ್ತಿದೆ. ನಮ್ಮ ಸಮುದಾಯಕ್ಕೆ ಶೇ10% ರಷ್ಟು ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದರು.

. ಒಂದು ವೇಳೆ ನಮ್ಮ ಸಮುದಾಯಕ್ಕೆ ಶೇ10% ರಷ್ಟು ಮೀಸಲಾತಿ ನೀಡದೆ ಹೋದರೆ ಉಗ್ರ ಹೋರಾಟವನ್ನು ಹಮ್ಮಿಕೊಳಳುತ್ತೇವೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಹನುಮಂತು,ಬಸವರಾಜ,ಹುಲಿಗೆಪ್ಪ, ಈರಣ್ಣ,ವೆಂಕಟೇಶ,ತಿಮ್ಮರೆಡ್ಡಿ,ಹುಲ್ಲಗಪ್ಪ ಉಪಸ್ಥಿತರಿದರು.

ದಿ.16 ಮಡಿವಾಳ ಸಮಾಜ ಎಸ್ಸಿ ಸೇರ್ಪಡೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಅಹೋರಾತ್ರಿ ಧರಣಿ

ಕುಲಶಾಸ್ತ್ರ ಅಧ್ಯಯನ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ

ಜಮುನಾ, ಶಾಂತಕುಮಾರ, ಬಿ.ವೆಂಕಟೇಶ, ನರಸಪ್ಪ, ಯು. ಆಂಜನೇಯ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಿಂಧನೂರು ಮಡಿವಾಳ ಸಮಾಜವನ್ನು ಎಸ್ಸಿ ಪಟ್ಟಿಗೆ ಸೇರಿಸಲು ಆಗ್ರಹ: ಮಾ.16ರಿಂದ ಅಹೋರಾತ್ರಿ ಪ್ರತಿಭಟನೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಡಿವಾಳ ಮಾಚಿದೇವ ಯುವ ಘಟಕದ ಅಧ್ಯಕ್ಷ ಮುದಿಯಪ್ಪ ಡೈಮೆಂಡ್, ಮುಖಂಡರಾದ ಮಾಬುಸುಭಾನ್ ಮಡಿವಾಳ, ರಾಮಣ್ಣ ಹಂಚಿನಾಳ, ಮೂಕಪ್ಪ ಮಾಡಶಿರವಾರ, ಮುದುಕಪ್ಪ ಗೋಮರ್ಸಿ ಇತರರು ಇದ್ದರು.

ಶಿವನಗೌಡ ನಾಯಕ ವಿರುದ್ಧ ಛಲವಾದಿ ಮಹಾಸಭಾ ದೂರು ಹಿಂಪಡಿಗೆ ಒತ್ತಾಯ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯದ ಹಕ್ಕು ರಕ್ಷಣೆ ಹಿತಕಾಯದ ಮಹಾದೇವ ಸಚಿವ ಸ್ಥಾನದಿಂದ ವಜಾಕ್ಕೆ ಅಗ್ರಹ

ಮೀಸಲಾತಿಗೂ ವಿರುದ್ಧ ಇರುವ ಹೆಚ್.ಸಿ. ಮಹಾದೇವಪ್ಪ ರವರಾಗಲಿ ಅವರ ಸಮಾಜ ಕಲ್ಯಾಣ ಇಲಾಖೆಯು ಒಂದೇ ಸಮುದಾಯ ಏಕಸೌಮ್ಯ ಇರುವುದರಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮೀಸಲಾತಿಗೆ ರಕ್ಷಣೆ ಇಲ್ಲದಂತಾಗಿದೆ.

2022 ರಲ್ಲಿ ಶ್ರೀ ಪ್ರಸನ್‌ನಂದಪುರಿ ಸ್ವಾಮಿಗಳು ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠ ರಾಜನಳ್ಳಿ, ಹರಿಹರ, ದಾವಣಗೇರಿ ರವರ 267 ದಿನಗಳ ಧರಣಿ ಸತ್ಯಗ್ರಹ ಹೋರಾಟಕ್ಕೆ ಎಲ್ಲಾ ದಲಿತ ಸಂಘರ್ಷ ಸಮಿತಿ ಸಂಘಟನೆಗಳು, ಒಳಮೀಸಲಾತಿ ಸಂಘಟನೆಗಳ ಬೆಂಬಲದಿಂದ ಮತ್ತು ನಿವೃತ್ತ ನ್ಯಾ. ಹೆಚ್.ಎನ್.ನಾಗಮೋಹನ್‌ದಾಸ ರವರ ಸಮಿತಿಯ ಶಿಫಾರಸ್ಸಿ ನಂತೆ ಪರಿಶಿಷ್ಟ ಜಾತಿಗೆ ಮೀಸಲಾದ ಶೇ.15 ರಿಂದ 17 ಕ್ಕೆ. ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಶೇ.3 ರಿಂದ 7 ಕ್ಕೆ ಮೀಸಲಾತಿ ಹೆಚ್ಚಿಸಿ ರಾಜ್ಯಸರ್ಕಾರವು ಒಟ್ಟು ಮೀಸಲಾತಿ ಪ್ರಮಾಣ ಶೇ.56 ಅಂದರೆ ಶೇ.6 ಹೆಚ್ಚುವರಿ ಮೀಸಲಾತಿ ನೀಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿತ್ತು.ದಿ. 12ರಂದು ದೆಹಲಿಯಲ್ಲಿ ರಾಯಚೂರು ಲೋಕಸಭೆ ಸಂಸದರಾದ ಜಿ.ಕುಮಾರ ನಾಯ್ಕ ರವರು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾದ ಡಾ. ವಿರೇಂದ್ರಕುಮಾರ ರವರಿಗೆ ಮನವಿ ಸಲ್ಲಿಸಿ, ರಾಜ್ಯ ಸರ್ಕಾರ ಹೆಚ್ಚಿಸಿದ ಶೇ.56 ಮೀಸಲಾತಿಯನ್ನು ಸಂವಿಧಾನ 9ನೇ ಶೇಡ್ಯೂಲ್ ಗೆ ಸೇರಿಸಲು ಮನವಿ ಮಾಡಿದ್ದರೆ. ಸಚಿವ ಹೆಚ್.ಸಿ. ಮಹಾದೇವಪ್ಪ ನವರು ಇಂತಹ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ.

ಮಾಜಿ ಸಚಿವ ಶ್ರೀ ಕೆ.ಶಿವನಗೌಡ ನಾಯಕ ರವರ ಸಂತ್ರಸ್ತನ ಸಾತ್ವಿಕ ಆಕ್ರೋಶದ ಮಾತು ಬೆದರಿಕೆ ಪ್ರಕರಣ ಆಗುವುದಿಲ್ಲ. ಆದರೆ ಗೃಹಸಚಿವರಾದ ಜಿ.ಪರಮೇಶ್ವರ ಅವರಿಂದ ನಿರ್ದೇಶನ ಮಾಡಿಸಿ, ಪ್ರಕರಣ ದಾಖಲಾದರೆ ಅಚ್ಚರಿ ಪಡಬೇಕಾಗಿಲ್ಲವೆಂದರು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಹೆಚ್ಚಿಸಿದ ಶೇ.56 ಮೀಸಲಾತಿಗೆ ವಾಲ್ಮೀಕಿ ಸಮುದಾಯದ ಪರವಾಗಿ ಕೆ.ಶಿವನಗೌಡ ನಾಯಕ ರವರು ನಡೆಸುತ್ತಿರುವ ಹೋರಾಟವನ್ನು ನಾವು ಬೆಂಬಲಿಸುತ್ತೇವೆಂದರು.

ಈ ಸಂದರ್ಭದಲ್ಲಿ ಹೇಮರಾಜ್ ಆಸ್ಕಿಹಾಳ ಅಂಜಿನಯ್ಯ ಉಟ್ಕೂರು ನರಸಿಂಹಲು ಮರ್ಚೆಟಹಾಳ,ಶ್ರೀನಿವಾಸ ಕೊಪ್ಪರ ತಾಯಪ್ಪ ಗಧರ್ ಸೇರಿದಂತೆ ಅನೇಕರು ಉಪಸ್ಥಿಯರಿದ್ದರು

ರಾಜ್ಯದಲ್ಲಿ ಗ್ಯಾಸ್, ಡೀಸೆಲ್ ಹಾಗೂ ಪೆಟ್ರೋಲ್‌ಗೆ ಕೊರತೆ ಇಲ್ಲ : ಮಧು ಬಂಗಾರಪ್ಪ

ಚರ್ಚೆ ನಡೆದಿದೆ. ಇದು ಅತ್ಯವಶ್ಯಕ ವಸ್ತುಗಳಾದ ಕಾರಣಕ್ಕೆ ಇದನ್ನು ಪೂರೈಸಬೇಕೆಂದು ಹೇಳಲಾಗಿದೆ. ಈ ಕುರಿತು ಕೇಂದ್ರ ಸರ್ಕಾರ ಗಮನ ಹರಿಸಬೇಕಿದೆ ಎಂದರು.

ಸದ್ಯ ಯಾವುದೇ ಸಮಸ್ಯೆ ಇಲ್ಲ. ಎಲ್ಲಾ ಕಡೆ ಗ್ಯಾಸ್, ಡೀಸೆಲ್, ಪೆಟ್ರೋಲ್ ಲಭ್ಯತೆ ಇದೆ. ಆತಂಕಕ್ಕೆ ಒಳಗಾದಾಗ ಎಲ್ಲರೂ ಒಟ್ಟಿಗೆ ಮುಗಿಬಿದ್ದಾಗ ಈ ರೀತಿಯ ಸಮಸ್ಯೆ ಆಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸದ್ಯ ಯಾವುದೇ ಸಮಸ್ಯೆ ಇಲ್ಲ. ಈ ಕುರಿತು ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸುತ್ತೇನೆ ಎಂದು ತಿಳಿಸಿದರು.

ಬೇಸಿಗೆ ಪ್ರಾರಂಭವಾಗಿದೆ. ಈ ಕುರಿತು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ. ಈ ಕುರಿತು ಮೇಲ್ಮನೆಯಲ್ಲಿ ಸದಸ್ಯರು ಹೇಳಿದ್ರು. ಚರ್ಚೆ ನಡೆಸಲಾಗಿದೆ. ಈ ಕುರಿತು ನಾನು ಹಿಂದೆಯೇ ಚರ್ಚೆ ನಡೆಸಿದ್ದೇವೆ. ಡಿಸಿ ಹಾಗೂ ಸಿಇಒ ಅವರ ಜೊತೆ ಚರ್ಚೆ ನಡೆಸಿದ್ದೇನೆ ಎಂದಿದ್ದಾರೆ.

ಗ್ಯಾರಂಟಿ ಯೋಜನೆ ನೀಡಲಾಗಿದೆ. ಇದೆಲ್ಲಾ ದೊಡ್ಡ ಮಟ್ಟದ ಅಭಿವೃದ್ದಿನೇ ಆಗುತ್ತದೆ. ಅಧಿವೇಶನ ಇನ್ನೂ ನಡೆಯುತ್ತಿದೆ. ಸಿಎಂ ಅವರು ಇನ್ನೂ ಉತ್ತರ ಕೊಡುವುದು ಇದೆ. ಅವರು ಸಪ್ಲಿಮೆಂಟರಿಯಾಗಿ ಕೊಡುತ್ತಾ ಹೋಗುತ್ತಾರೆ. ಕೆಲವರು ಬಜೆಟ್ ಬಗ್ಗೆ ಮಾತನಾಡಿದ್ದಾರೆ. ಇಕ್ಬಾಲ್‌ನವರ ಕೆಲಸ ಆಗಿಲ್ಲ. ನಾನು ಶರಾವತಿ ನದಿ ನೀರು ಕೇಳಿದ್ದೇನೆ. ನನ್ನ ಕೆಲಸ ಇನ್ನೂ ಉಳಿದಿದೆ. ಇಕ್ಬಾಲ್ ಅವರ ಜೊತೆ ಪಕ್ಷದವರು ಚರ್ಚೆ ಮಾಡುತ್ತಾರೆ ಎಂದು ತಿಳಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ವಿದ್ಯಾರ್ಥಿಗಳಿಗೆ ತಾ.ಪಂ ಇಒ ರಿಂದ ಪರೀಕ್ಷೆ ಸಲಕರಣೆ ವಿತರಣೆ. ಪರಿಕ್ಷೆ ಭಯ ಬೇಡ - ಶಶಿಧರ ಸ್ವಾಮಿ



ಸಿರವಾರ.ಮಾ.13-

ವಿದ್ಯಾರ್ಥಿ ಜೀವನದಲ್ಲಿ ಎಸ್ ಎಸ್ ಎಲ್ ಸಿ ಒಂದು ಹಂತವಾಗಿದೆ, ಪರೀಕ್ಷೆ ಎಂದು ಭಯ ಪಡದೆ ನಿರ್ಭಯವಾಗಿ ಪರೀಕ್ಷೆ ಎದುರಿಸಿ ಅದಿಕ ಅಂಕ ಗಳಿಸಿ, ಶಾಲೆಗೆ, ಪಾಲಕರಿಗೆ ಕೀರ್ತಿ ತನ್ನಿ ಎಂದು ತಾಲೂಕು ಪಂಚಾಯತಿ ಮುಖ್ಯ ಕಾರ್ಯನಿರ್ವಾಕ ಅಧಿಕಾರಿ ಶಶಿಧರ ಸ್ವಾಮಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ತಾಲೂಕಿನ ನವಲಕಲ್ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳಿಗೆ,

ಉತ್ತಮ ಅಂಕ ಪಡೆಯುವ ನಿಟ್ಟಿನಲ್ಲಿ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಬೇಕು. ಉತ್ತಮ ಅಂಕಗಳನ್ನು ಪಡೆದು, ಎಲ್ಲಾರೂ ಉತ್ತೀರ್ಣರಾಗಬೇಕು. ಹೆತ್ತ ತಂದೆ ತಾಯಿಗಳಿಗೆ ಮತ್ತು ಕಲಿಸಿದ ಗುರುಗಳಿಗೆ ಕೀರ್ತಿಯನ್ನು ತರಬೇಕು, ಎಂದು ಹೇಳಿದರು. ನಂತರಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಪರೀಕ್ಷಾ ಪ್ಯಾಡ್ ಮತ್ತು ಪೇನ್ ಗಳನ್ನು ನೀಡಿ,ಶುಭವನ್ನು ಹಾರೈಸಿದರು.

ಶಾಲೆಯ ಮುಖ್ಯೋಪಾಧ್ಯರಾದ ರಾಜಶೇಖರ ದಿನ್ನಿ,

ಶಿಕ್ಷಕರಾದ ಭೂಪನಗೌಡ, ಭಾಗ್ಯಶ್ರೀ ಮತ್ತು ತಾಲೂಕ ಪಂಚಾಯತ್ ಸಿರವಾರ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಗಲಕೋಟೆ ಉಪಚುನಾವಣೆ : ಬಿಜೆಪಿಯಿಂದ ಚುನಾವಣಾ ಪೂರ್ವ ಕಾರ್ಯಾಗಾರ

2028ರ ಸಾರ್ವತ್ರಿಕ ಚುನಾವಣೆಗೆ ಈ ಬಾಗಲಕೋಟೆ ಉಪ ಚುನಾವಣೆ ಶ್ರೀಕಾರ



ಬಾಗಲಕೋಟೆ,ಮಾ.14-

ಹಿಂದೂ ವಿರೋಧಿ ಕಾಂಗ್ರೆಸ್ಸ ಸರಕಾರವನ್ನು ಕಿತ್ತೊಗೆಯಲು ರಾಜ್ಯದ ಜನ ತುದಿಗಾಲಿನ ಮೇಲೆ ನಿಂತಿದ್ದಾರೆ, 2028 ಸಾರ್ವತ್ರಿಕ ಚುನಾವಣೆಗೆ ಬಾಗಲಕೋಟ ಉಪ ಚುನಾವಣೆ ಶ್ರೀಕಾರ ಹಾಕಲಿದೆ ಎಂದು ಬಿಜೆಪಿಯ ರಾಜ್ಯ ಕಾರ್ಯದರ್ಶಿ ಹಾಗೂ ಚುನಾವಣಾ ಉಸ್ತುವಾರಿಗಳಾದ ಶರಣು ತಳ್ಳಿಕೇರಿ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘ ನೂತನ ಸಭಾಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿಯಿಂದ ನಡೆದ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣಾ ಪೂರ್ವಬಾವಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಉಪ ಚುನಾವಣೆ ಗೆಲ್ಲುವ ಮೂಲಕ 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರಕಾರ ಬಂದೆ ಬರುತ್ತೆ ಎಂಬ ಸಂದೇಶವನ್ನು ಸಾರೋಣ, ಬಾಗಲಕೋಟೆ ಹಿಂದೂತ್ವದ ಗಟ್ಟಿ ನೆಲವಾಗಿದ್ದು, ಈ ಹಿಂದೂ ವಿರೋಧಿ ಸರಕಾರ ತನ್ನ ಹಗರಣ, ಆಡಳಿತ ವೈಫಲ್ಯ, ಅಭಿವೃದ್ಧಿಯ ಕಾರ್ಯಗಳೆ ಇಲ್ಲದಿರುವ ಕಾಂಗ್ರೆಸ್ ಸರಕಾರ ರಾಜ್ಯದ ಜನತಗೆ ಬೇಡವಾಗಿದೆ, ಬಾಗಲಕೋಟೆ ಅಭಿವೃದ್ಧಿ ಕಂಡಿದ್ದು ಶಾಸಕರಾಗಿದ್ದ ಡಾ.ವೀರಣ್ಣ ಚರಂತಿಮಠ ಅವರ ಅವದಿಯಲ್ಲಿ, ಯಾರಿಂದ ಅಭಿವೃದ್ಧಿ ಸಾದ್ಯ ಎಂಬ ಸತ್ಯ ಬಾಗಲಕೋಟೆ ಜನತೆ ಗೋತ್ತಿದೆ. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಿಂದ ಕೆಳಗೆ ಇಳಿಯುವ ಸಂದರ್ಭದಲ್ಲಿ ಅನುಕಂಪ ಪಡೆಯುವ ಸಲುವಾಗಿ ಕುರಿಕಾಯುವವರು ನೆನೆಪಾಗುತ್ತಾರೆ, ದೇವರಾಜ ಅರಸು ಅವರ ದಾಖಲೆಯನ್ನು ಮಿರಿಸಿರುವೆ ಎಂಬ ಅಹಂಕಾರದಲ್ಲಿರುವ ಅವರು ಏರಡು ಸಾರಿ ಮುಖ್ಯಮಂತ್ರಿಯಾದರೂ ಕುರಿಕಾಯುವರಿಗೆ ಕೋಟ್ಟಿರುವ ಸಾಧನೆ ಶೂನ್ಯ, ರಾಜ್ಯದಲ್ಲಿ ಇಲ್ಲಿವರೆಗೂ ಆಕಸ್ಮಿಕ ಸಾವವನ್ನಪ್ಪಿದ 90 ಸಾವಿರ ಕುರಿಗಳಲ್ಲಿ ಬರಿ 30 ಸಾವಿರ ಕುರಿಗಳಿಗೆ ಪರಿಹಾರ ಕೊಟ್ಟಿದ್ದಾರೆ ಇನ್ನೂ 45ಕೋಟಿ ರೂ ಪರಿಹಾರ ಕೊಡುವಂತ ಕೆಲಸ ಸಿದ್ದರಾಮಯ್ಯನವರಿಂದ ಆಗಿಲ್ಲ, ಮೊದಲು ಕುರಿಕಾಯುವವರಿಗೆ ನ್ಯಾಯ ಕೊಡಿ ಎಂದ ಅವರು ಬಾಗಲಕೋಟೆ ರಾಜಕೀಯ ಪುನರ್ಜನ್ಮ ನೀಡಿದ ಬಾಗಿಲಕೋಟೆಗೆ ತಮ್ಮ ಕೊಡುಗೆ ಶೂನ್ಯವಾಗಿದೆ ಎಂದರು.

ಬೆಳಗಾವಿ ವಿಭಾಗದ ಪ್ರಭಾರಿ ಸಂಜಯ ಪಾಟೀಲ ಮಾತನಾಡಿ ಬಾಗಲಕೋಟೆ ಉಪ ಚುನಾವಣೆ ಇದೊಂದು ಧರ್ಮ ಯುದ್ದ, ಈ ಧರ್ಮಯುದ್ದಲ್ಲಿ ಗೇಲವು ಶತಸಿದ್ದವಾಗಿದೆ, ಹಿಂದೂಗಳಿಗಾಗಿ ಇರುವ ಏಕೈಕ ರಾಷ್ಟ್ರ ಭಾರತ, ಗರ್ವದಿಂದ ವಂದೇ ಮಾತರಂ ಹೇಳುವವರು ಬಿಜೆಪಿ ಕಾರ್ಯಕರ್ತರು ಮಾತ್ರ ಅದು ನಮ್ಮ ಹೆಮ್ಮೆ, ಬಿಜೆಪಿಯವರು ಮುಸ್ಲಿಂ ವಿರೋಧಿಗಳಲ್ಲ, 60 ವರ್ಷ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯವನ್ನು ಬರಿ ತನ್ನ ಓಟ ಬ್ಯಾಂಕ ಮಾಡಿಕೋಂಡ್ಡಿದ್ದಾರೆ ಹೊರತು ಅವರಿಗಾಗಿ ನೀಡಿರುವ ಕೋಡುಗೆ ಶೂನ್ಯ, ಇದನ್ನು ಎಲ್ಲರೂ ಅರ್ಥ ಮಾಡಿಕೋಳ್ಳಬೇಕು. ಬಾಗಲಕೋಟೆ ಜನ ಅತ್ಯಂತ ಬುದ್ದಿವಂತರು, ಅಭಿವೃದ್ಧಿಪರ, ಬಿಜೆಪಿ ಪರವಾಗಿದ್ದಾರೆ ಎಂದರು.

ಬೈಲಹೊಂಗಲದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಮಾತನಾಡಿ ಅಭಿವೃದ್ಧಿ ಇಲ್ಲದ ಹಗರಣಗಳ ಸರಕಾರವಾಗಿದೆ ಎಂದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ ಬಾಗಲಕೋಟೆ ಉಪ ಚುನಾವಣೆಯಲ್ಲಿ ನಾವು ಗೆದ್ದೆ ಗೆಲ್ಲುತ್ತೆವೆ, ಆ ಸಾಮರ್ಥ ಬಿಜೆಪಿ ಕಾರ್ಯಕರ್ತರಿಗೆ ಇದೆ, ಬಾಗಲಕೋಟೆ ಸರ್ವಾಂಗೀಣ ಅಬಿವೃದ್ಧಿ ಕಾಣಲು ಬಿಜೆಪಿ ಸರಕಾರ ಹಾಗೂ ಶಾಸಕರಾಗಿದ್ದ ಡಾ. ವೀರಣ್ಣ ಚರಂತಿಮಠ ಅವರು ಕಾರಣ, ಬಾಗಲಕೋಟೆ ಜನತಗೆ ತಮ್ಮ ಸುರಕ್ಷತೆ ಹಾಗೂ ಅಭಿವೃದ್ಧಿಯ ಅರಿವು ಇದೆ, ಈಗಾಗಿ ಅವರು ಬಿಜೆಪಿಯನ್ನು ಖಂಡಿತ ಗೆಲ್ಲಿಸುತ್ತಾರೆ, 2028ರ ಚುನಾವಣೆಗೆ ಶ್ರೀಕಾರವೇ ಬಾಗಲಕೋಟೆ ಉಪಚುನಾವಣೆ ಎಂದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ವಹಿಸಿದ್ದರು. ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡಗೌಡರ, ಡಾ.ಕೆ.ಬಸವ ರಾಜ ಕ್ಯಾವಟರ್, ಸುಭಾಸ ಪಾಟೀಲ. ಬಸವರಾಜ ಯಂಕಂಚಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಮಲ್ಲೇಶ ವೈಜಾಪುರ, ಕಲ್ಲಪ್ಪ ಭಗವತಿ, ಉಮೇಶ ಹಂಚಿನಾಳ, ಸೇರಿದಂತೆ ಅನೇಕರು ವೇದಿಕೆ ಮೇಲೆ ಇದ್ದರು.

ಕಾರ್ಯಾಗಾರದಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ವಿಸ್ತಾರಕರು ಸೇರಿದಂತೆ 500ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಬಾಕ್ಸ : ಬಾಗಲಕೋಟೆ ಉಪ ಚುನಾವಣೆಯಲ್ಲಿ ನಾವು ಗೆದ್ದೆ ಗೆಲ್ಲುತ್ತೆವೆ, ಆ ಸಾಮರ್ಥ ಬಿಜೆಪಿ ಕಾರ್ಯಕರ್ತರಿಗೆ ಇದೆ - ಅರುಣ ಶಹಾಪುರ, ಚುನಾವಣಾ ಉಸ್ತುವಾರಿ.

ಬಾಕ್ಸ : ಬಾಗಲಕೋಟೆ ಉಪ ಚುನಾವಣೆ ಇದೊಂದು ಧರ್ಮ ಯುದ್ದ, ಈ ಧರ್ಮಯುದ್ದಲ್ಲಿ ಗೇಲವು ಶತಸಿದ್ದವಾಗಿದೆ - ಸಂಜಯ ಪಾಟೀಲ. ಬೆಳಗಾವಿ ವಿಭಾಗದ ಪ್ರಭಾರಿ.

ಬಾಕ್ಸ : ಅಭಿವೃದ್ಧಿ ಇಲ್ಲದ ಹಗರಣಗಳ ಸರಕಾರ : ವಿಶ್ವನಾಥ ಪಾಟೀಲ. ಮಾಜಿ ಶಾಸಕ ಬೈಲಹೊಂಗಲದ

ಬಾಕ್ಸ : ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಿಂದ ಕೆಳಗೆ ಇಳಿಯುವ ಸಂದರ್ಭದಲ್ಲಿ ಅನುಕಂಪ ಪಡೆಯುವ ಸಲುವಾಗಿ ಕುರಿಕಾಯುವವರು ನೆನೆಪಾಗುತ್ತಾರೆ. ಮೊದಲು ಕುರಿಕಾಯುವವರಿಗೆ ನ್ಯಾಯ ಕೊಡಿ-ಶರಣು ತಳ್ಳಿಕೇರಿ. ಬಿಜೆಪಿಯ ರಾಜ್ಯ ಕಾರ್ಯದರ್ಶಿ ಭಾಗವಹಿಸಿದ ಕಾರ್ಯಕರ್ತರು.



ಸಿರುಗುಪ್ಪ:ಮುದ್ದಟನೂರು ಅನಿತಾಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರಪ್ರಶಸ್ತಿ ಪ್ರಧಾನ

ಸಿರುಗುಪ್ಪ,ಮಾ.14-

ತಾಲೂಕು ಮುದ್ದಟನೂರು ಗ್ರಾಮ ಪಂಚಾಯತ್ ಸ್ವಸಹಾಯ ಸಂಘದ ಪ್ರತಿನಿಧಿ ಅನಿತಾ ಅವರಿಗೆ ನವ ದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರಧಾನ ಮಾಡಿದರು

ಗ್ರಾಮೀಣ ಕೊಳವೆ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವಲ್ಲಿ ತೋರಿದ ಬದ್ಧತೆ ಮತ್ತು ನಾಯಕತ್ವಕ್ಕೆ ರಾಷ್ಟ್ರಮಟ್ಟದ ಗೌರವ ಪಡೆದಿದ್ದಾರೆ ಗ್ರಾಮದಲ್ಲಿ 247 ನೀರು ಸರಬರಾಜು ವ್ಯವಸ್ಥೆಯನ್ನು ಸುಸ್ಥಿರವಾಗಿ ನಡೆಸುವಲ್ಲಿ ಅವರು ನಿರಂತರವಾಗಿ ಶ್ರಮಿಸಿರುವುದು ಈ ಸಾಧನೆಗೆ ಕಾರಣವಾಗಿದೆ ಮುದ್ದಟನೂರು ಗ್ರಾಮ ಪಂಚಾಯಿತಿಯನ್ನು 2025ರ ಫೆ. 27ರಂದು 247 ನೀರು ಸರಬರಾಜು ಗ್ರಾಮ ಎಂದು ಘೋಷಿಸಲಾಯಿತು ಆ ಬಳಿಕ ವ್ಯವಸ್ಥೆಯ ಸುಗಮ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಅನಿತಾ ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ ಗ್ರಾಮಮಟ್ಟದಲ್ಲಿ ಮನೆಮನೆಗೂ ಟ್ಯಾಪ್ ಸಂಪರ್ಕ ಒದಗಿಸುವ ಕಾರ್ಯದಲ್ಲಿ ಅವರು ಗ್ರಾಮ ಪಂಚಾಯಿತಿ ಮತ್ತು ಗ್ರಾಮ ನೀರು ಹಾಗೂ ಸ್ವಚ್ಛತಾ ಸಮಿತಿ ಸಹಕಾರ ನೀಡಿದ್ದು ಇನ್ನೂ ಸಂಪರ್ಕ ಪಡೆಯದ ಮನೆಗಳನ್ನು ಗುರುತಿಸಿ ಜನರನ್ನು ಪ್ರೋತ್ಸಾ ಹಿಸುವ ಕಾರ್ಯವನ್ನು ಮಾಡುತ್ತಿದ್ದಾರೆ

ಅನಿತಾ ಅವರ ಸಾಧನೆ ನಿರಂತರವಾಗಿ ಶ್ರಮಿಸುವ ಯಶಸ್ಸಿ ಗೆ ದೊರೆತಿರುವ ಗೌರವಕ್ಕೆ ರಾಷ್ಟ್ರೀಯ ಸಾಕ್ಷರತಾ ಸಮಾಜ ಸುಧಾರಕ ಅಬ್ದುಲ್ ನಬಿ ಅವರು ಅಭಿನಂದಿಸಿ ಶುಭ ಹಾರೈಸಿದ್ದಾರೆ

ಹೆಚ್ಚುವರಿ ಹಣ ವಸೂಲಿ ಕ್ರಮಕ್ಕೆ. ಸಿ. ಪಿ. ಐ (ಎಂ ಎಲ್) ರೆಡ್ ಸ್ಟಾರ್ ಒತ್ತಾಯ

ಬಳಗಾನೂರಿನಲ್ಲಿರುವ. ಹೆಚ್‌ಪಿ ಗ್ಯಾಸ್ ಏಜೆನ್ಸಿ ಯ. ಡಿಲೆವರಿ



ಸಿಬ್ಬಂದಿಗಳು. ಜನಸಾಮಾನ್ಯರಿಂದ ಹೆಚ್ಚುವರಿ ಹಣ ವಸೂಲಿ ಮಾಡುತ್ತಿದ್ದಾರೆ. ಎಂದು ಸಿಪಿಐ. ಎಂಎಲ್. ರೆಡ್ ಸ್ಟಾರ

ಜಿಲ್ಲಾ ಸಮಿತಿ ಸದಸ್ಯ. ಎಂ ಗಂಗಾಧರ್ ಆರೋಪಿಸಿದ್ದಾರೆ. ಈ ಕುರಿತಂತೆ ಪತ್ರಿಕಾ ಹೇಳಿಕೆ ನೀಡಿರುವ ಅವರು. ಬಳಗಾನೂರ ದಲ್ಲಿ ಕಾರ್ಯ ನಿರ್ವಹಿಸುತ್ತಿರುವ. ಹಿಂದುಸ್ತಾನ್ ಪೆಟ್ರೋಲಿಯಂ ಸಂಸ್ಥೆಯ. ಶ್ರೀ ಬಸವೇಶ್ವರ ಎಚ್‌ಪಿ ಗ್ಯಾಸ್ ಗ್ರಾಮೀಣ ವಿತರಕರು. ಎಂಬ ಏಜೆನ್ಸಿ ವ್ಯಾಪ್ತಿಯ ಗ್ರಾಮಗಳು ಹಾಗೂ ಪಟ್ಟಣಗಳಲ್ಲಿ. ಬಡ ಮತ್ತು ಮಧ್ಯಮ ವರ್ಗದ ಜನರ ಮೇಲೆ ಅಕ್ರಮಣ ವಸೂಲಿ ಮಾಡುತ್ತಿದ್ದಾರೆ. ಗ್ರಾಹಕರು ಗ್ಯಾಸ್ ಸಿಲೆಂಡರ್ ಅನ್ನು. ಆನ್ಲೈನ್ ಮೂಲಕ ಬುಕ್ ಮಾಡಿದರೂ.ಸಹ ಗ್ಯಾಸ್ ತಲುಪಿಸುವ ಸಮಯದಲ್ಲಿ ಡೆಲಿವರಿ ಸಿಬ್ಬಂದಿ ಗ್ರಾಹಕರಿಂದ ಹೆಚ್ಚುವರಿಗಾಗಿ ರೂ. 50 ರಿಂದ 100 ವರೆಗೂ ಅಕ್ರಮಣ ವಸೂಲಿ ಮಾಡುತ್ತಿದ್ದಾರೆ. ಹೆಚ್ಚುವರಿ ಹಣ ನೀಡದಿದ್ದರೆ . ಗ್ಯಾಸ್ ಕೊಡುವುದಿಲ್ಲ ಎಂದು ಬೆದರಿಕೆ ಹಾಕುತ್ತಿರುವ ಘಟನೆಗಳು ಜರುಗಿವೆ . ಅಗತ್ಯ ಸರಕು ಗಳ ಕಾಯ್ದೆ 1995 ಎಲ್ಪಿಜಿ. ಪೂರೈಕೆ ಮತ್ತು ವಿತರಣೆ ನಿಯಂತ್ರಣ. ಆದೇಶ 2000. ಈ ಕಾಯ್ದೆಗಳ ಪ್ರಕಾರ. ಗ್ಯಾಸ್ ಸಿಲೆಂಡರ್ ಬೆಲೆ ಹೊರತುಪಡಿಸಿ. ಹೆಚ್ಚುವರಿ ಹಣ ವಸೂಲಿ ಮಾಡುವುದು ಕಾನೂನುಬಾಹಿರ ಅಪರಾಧವಾಗಿದ್ದು. ಸಂಬಂಧಪಟ್ಟ ವಿತರಕರ. ಲೈಸನ್ಸ್ ರದ್ದುಪಡಿಸಬೇಕು. ಅಲ್ಲದೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ. ಹಾಗೂ ತಹಸಿಲ್ದಾರರನ್ನು. ಆಗ್ರಹಿಸಿದ್ದಾರೆ. ನಿರ್ಲಕ್ಷ ವಹಿಸಿದರೆ. ಗ್ಯಾಸ್ ಏಜೆನ್ಸಿ ಎದುರು. ಅಥವಾ ತಹಶೀಲ್ದಾರ್ ಕಾರ್ಯಾಲಯದ ಮುಂದೆ. ಪ್ರತಿಭಟನೆ. ಹಮ್ಮಿಕೊಳ್ಳಲಾಗುತ್ತದೆ.ಎಂದು ಪ್ರತಿಭಟನೆಯ ಮೂಲಕ ಎಚ್ಚರಿಸಿದ್ದಾರೆ..

ಸಿರವಾರ: ಚರಂಡಿ ಸ್ವಚ್ಛತೆ ಹಾಗೂ ಫಾಗಿಂಗ್‌ಗೆ ಒತ್ತಾಯಿಸಿ ಭಾರತೀಯ ಮಾನವ ಹಕ್ಕುಗಳ ಪರಿಷತ್‌ನಿಂದ ಮನವಿ ಸಲ್ಲಿಕೆ



ಸಿರವಾರ: ತಾಲ್ಲೂಕಿನಾದ್ಯಂತ ಹೆಚ್ಚುತ್ತಿರುವ ಸಾಂಕ್ರಾಮಿಕ ರೋಗಗಳ ಭೀತಿ ಹಾಗೂ ನೈರ್ಮಲ್ಯದ ಕೊರತೆಯನ್ನು ನೀಗಿಸಲು ಆಗ್ರಹಿಸಿ, ಭಾರತೀಯ ಮಾನವ ಹಕ್ಕುಗಳ ಪರಿಷತ್ ವತಿಯಿಂದ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ()ಮನವಿ ಪತ್ರ ಸಲ್ಲಿಸಲಾಯಿತು.

ಮುಖ್ಯಾಂಶಗಳು:

ಹದಗೆಟ್ಟ ನೈರ್ಮಲ್ಯ: ಸಿರವಾರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಚರಂಡಿಗಳು ಹೂಳು ತುಂಬಿ ಕಲುಷಿತ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಪರಿಷತ್ತಿನ ಪದಾಧಿಕಾರಿಗಳು ಆತಂಕ ವ್ಯಕ್ತಪಡಿಸಿದರು.

ಸೊಳ್ಳೆಗಳ ಹಾವಳಿ: ಚರಂಡಿಗಳನ್ನು ಸರಿಯಾಗಿ ಸ್ವಚ್ಛಗೊಳಿಸದ ಕಾರಣ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದ್ದು, ಡೆಂಗ್ಯೂ ಮತ್ತು ಮಲೇರಿಯಾದಂತಹ ರೋಗಗಳು ಹರಡುವ ಆತಂಕವಿದೆ. ಕೂಡಲೇ ಎಲ್ಲಾ ಗ್ರಾಮಗಳಲ್ಲಿ ಫಾಗಿಂಗ್ () ಮಾಡಿಸಬೇಕು ಎಂದು ಒತ್ತಾಯಿಸಲಾಯಿತು.

ಅಧಿಕಾರಿಗಳಿಗೆ ಎಚ್ಚರಿಕೆ: ನಾಗರಿಕರ ಮೂಲಭೂತ ಹಕ್ಕುಗಳಲ್ಲಿ ಆರೋಗ್ಯದ ಹಕ್ಕು ಕೂಡ ಒಂದಾಗಿದೆ. ಪಂಚಾಯಿತಿ ಅಧಿಕಾರಿಗಳು ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಪರಿಷತ್ ಎಚ್ಚರಿಸಿದೆ.

ಪ್ರಮುಖ ಬೇಡಿಕೆಗಳು:

ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಕ್ಷಣವೇ ಚರಂಡಿ ಹೂಳು ತೆಗೆಯುವ ಕಾರ್ಯ ಆರಂಭಿಸಬೇಕು.

ಸೊಳ್ಳೆಗಳ ನಿಯಂತ್ರಣಕ್ಕಾಗಿ ನಿಯಮಿತವಾಗಿ ಗ್ರಾಮದ ಪ್ರತಿಯೊಂದು ಓಣಿಗಳಲ್ಲಿ ಫಾಗಿಂಗ್ ಮತ್ತು ಬ್ಲೀಚಿಂಗ್ ಪೌಡರ್ ಸಿಂಪಡಿಸಬೇಕು.

ಕುಡಿಯುವ ನೀರಿನ ತೊಟ್ಟಿಗಳನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಶುದ್ಧ ನೀರು ಒದಗಿಸಬೇಕು.

ಈ ಸಂದರ್ಭದಲ್ಲಿ ಭಾರತೀಯ ಮಾನವ ಹಕ್ಕುಗಳ ಪರಿಷತ್‌ನ ಜಿಲ್ಲಾಧ್ಯಕ್ಷರಾದ ಹಿದಾಯತ್ ಬಡೆಘ್ರ.ರ್ ಜಿಲ್ಲಾ ಸಂಚಾಲಕರಾದ ಶ್ರೀನಿವಾಸ್ ರೆಡ್ಡಿ. ತಾಲೂಕು ಸಂಚಾಲಕರಾದ ಇಸ್ಮಾಯಿಲ್. ಸದಸ್ಯರಾದ ಆಟೋ ಖಾಜಾ ಇನ್ನು ಹಲವಾರು ಉಪಸ್ಥಿತರಿದ್ದರು.

ಸಿರವಾರ: ಬಿರುಗಾಳಿಗೆ ಮರ ಬಿದ್ದು ಅಗ್ನಿ ಅವಘಡ - ತಪ್ಪಿದ ಭಾರಿ ಅನಾಹುತ



ಸಿರವಾರ: ಪಟ್ಟಣದ ಒಂದನೇ ವಾರ್ಡ್‌ನಲ್ಲಿ ನಿನ್ನೆ ಸಂಜೆ ಬೀಸಿದ ಬಿರುಗಾಳಿಯ ರಭಸಕ್ಕೆ ಮರವೊಂದು ವಿದ್ಯುತ್ ಪರಿವರ್ತಕದ () ಮೇಲೆ ಬಿದ್ದ ಪರಿಣಾಮ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಬೆಂಕಿ ಕಾಣಿಸಿಕೊಂಡಿತ್ತು.

ಘಟನೆಯ ವಿವರ:

ವಿದ್ಯುತ್ ತಂತಿಗಳ ಮೇಲೆ ಮರ ಬಿದ್ದ ತಕ್ಷಣವೇ ಕಿಡಿ ಹೊತ್ತಿಕೊಂಡು ಸಮೀಪದಲ್ಲಿದ್ದ ತಿಪ್ಪೆ ಗುಂಡಿಗಳಿಗೆ ಬೆಂಕಿ ವ್ಯಾಪಿಸಿದೆ. ಇದರಿಂದಾಗಿ ಸುತ್ತಮುತ್ತಲಿನ ತಿಪ್ಪೆ ಗುಂಡಿಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ. ಅದೃಷ್ಟವಶಾತ್, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಥಳಕ್ಕೆ ಜನಪ್ರತಿನಿಧಿಗಳ ಭೇಟಿ:

ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ವಾರ್ಡ್ ಸದಸ್ಯರಾದ ಕೃಷ್ಣ ನಾಯಕ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಹಾಜಿ ಚೌದರಿ ಅವರು ಸ್ಥಳಕ್ಕೆ ಆಗಮಿಸಿ, ಸಂಬಂಧಪಟ್ಟ ಜೆಸ್ಕಾಂ () ಮತ್ತು ಪೌರಾಡಳಿತ ಅಧಿಕಾರಿಗಳೊಂದಿಗೆ ಮಾತನಾಡಿ ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ವಾರ್ಡ್‌ನ ಇತರ ಸದಸ್ಯರು, ಜೆಸ್ಕಾಂ ಅಧಿಕಾರಿಗಳು. ಪಟ್ಟಣ ಪಂಚಾಯತ್ ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು. ಸಮಯಪ್ರಜ್ಞೆಯಿಂದ ಬೆಂಕಿ ನಂದಿಸಿದ್ದರಿಂದ ದೊಡ್ಡ ಮಟ್ಟದ ಆಸ್ತಿ ಹಾನಿ ತಪ್ಪಿದಂತಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಮೋದಿಯ ಸಣ್ಣತನವನ್ನು ದೊಡ್ಡತನದಿಂದ ಸೋಲಿಸಿದ ಇರಾನ್!



ಇಂಧನ ಭದ್ರತೆಯನ್ನು ಕಾಪಾಡಿಕೊಳ್ಳಲು ಭಾರತದ ಹಡಗುಗಳು ಹಾರ್ಮುಜ್ ಜಲಸಂಧಿಯಿಂದ ಹಾದುಹೋಗಲು ಅವಕಾಶ ಕೊಡುವುದಾಗಿ ಇರಾನ್ ಹೇಳಿದೆ. ತನ್ನ ಸಂಕಷ್ಟದ ನಡುವೆಯೂ ಇರಾನ್ ಮೆರೆದ ದೊಡ್ಡತನದ ಎದುರು, ಪ್ರಧಾನಿ ಮೋದಿ ಅವರ ಸಮಯ ಸಾಧಕ ಮತ್ತು ಇಸ್ರೇಲ್ ಪರವಾದ ಸಣ್ಣತನ ಮಂಡಿಯೂರಿದೆ.

ಪ್ರಸ್ತುತ ಮಧ್ಯಪ್ರಾಚ್ಯದಲ್ಲಿ ಇರಾನ್-ಅಮೆರಿಕ-ಇಸ್ರೇಲ್ ನಡುವಿನ ಯುದ್ಧವು ಜಾಗತಿಕ ಇಂಧನ ಪೂರೈಕೆಯ ಮೇಲೆ ಭಾರಿ ಒತ್ತಡ ಸೃಷ್ಟಿಸಿದೆ. ವಿಶ್ವದ ಒಟ್ಟು ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯಲ್ಲಿ ಸುಮಾರು 20%ರಷ್ಟು ಭಾಗವು ಸಾಗುವ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದ್ದು, ಜಾಗತಿಕ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದೆ. ಈ ಯುದ್ಧವನ್ನು ಅಮೆರಿಕ ನಿಲ್ಲಿಸಲು ಮತ್ತು ಹಿಂದೆ ಸರಿಯಲು ಜಾಗತಿಕ ಆರ್ಥಿಕ ಒತ್ತಡ ಅನಿವಾರ್ಯವೆಂದು ಇರಾನ್ ಹೇಳಿದೆ. ಇಂತಹ ಸೂಕ್ಷ್ಮ ಸನ್ನಿವೇಶದಲ್ಲಿಯೂ, ಭಾರತದ ಇಂಧನ ಭದ್ರತೆಯನ್ನು ಕಾಪಾಡಿಕೊಳ್ಳಲು ಭಾರತದ ಹಡಗುಗಳು ಹಾರ್ಮುಜ್ ಜಲಸಂಧಿಯಿಂದ ಹಾದುಹೋಗಲು ಅವಕಾಶ ಕೊಡುವುದಾಗಿ ಇರಾನ್ ಹೇಳಿದೆ. ತನ್ನ ಸಂಕಷ್ಟದ ನಡುವೆಯೂ ಇರಾನ್ ಮೆರೆದ ದೊಡ್ಡತನದ ಎದುರು, ಪ್ರಧಾನಿ ಮೋದಿ ಅವರ ಸಮಯ ಸಾಧಕ ಮತ್ತು ಇಸ್ರೇಲ್ ಪರವಾದ ಸಣ್ಣತನ ಮಂಡಿಯೂರಿದೆ.

ನೆರೆಯ ರಾಷ್ಟ್ರಗಳ ಮೇಲೆ ಇಸ್ರೇಲ್‌ನ ನಿರಂತರ ದಾಳಿ-ಆಕ್ರಮಣ, ಪ್ಯಾಲೆಸ್ತೀನ್ ಮೇಲಿನ ಇಸ್ರೇಲ್ ಕ್ರೌರ್ಯ, ಇರಾನ್ ಮತ್ತು ಇಸ್ರೇಲ್ ನಡುವಿನ ಶತ್ರುತ್ವ, ಅಮೆರಿಕದ ಸರ್ವಾಧಿಕಾರಿ ಹಪಾಹಪಿಕೆಯು ಮಧ್ಯಪ್ರಾಚ್ಯದಲ್ಲಿ ಅಸ್ಥಿರತೆಯನ್ನು ಹೆಚ್ಚಿಸಿದೆ. ಆದರೂ, ಪ್ರಧಾನಿ ಮೋದಿ ನೇತೃತ್ವದ ಭಾರತ ಸರ್ಕಾರವು ಇಸ್ರೇಲ್ ಪರವಾದ ಧೋರಣೆ ತಳೆದಿದೆ. ಮಧ್ಯಪ್ರಾಚ್ಯದಲ್ಲಿನ ಸಂಘರ್ಷವನ್ನು ಖಂಡಿಸುವಲ್ಲಿ ಅಥವಾ ದಾಳಿಗಳ ವಿರುದ್ಧ ನಿಲುವನ್ನು ತಳೆಯುವಲ್ಲಿ ಮೋದಿ ಹಿಂಜರಿಯುತ್ತಿದ್ದಾರೆ. ಅಡಗಿಕೊಂಡವರಂತೆ ವರ್ತಿಸುತ್ತಿದ್ದಾರೆ.

2023ರ ಅಕ್ಟೋಬರ್ ಗಾಜಾ ಮೇಲೆ ದಾಳಿ ಆರಂಭಿಸಿದ ನರಹಂತಕ ಇಸ್ರೇಲ್, ಈವರೆಗೆ ಸುಮಾರು 75 ಸಾವಿರ ಪ್ಯಾಲೆಸ್ತೀನಿಯರನ್ನು ಕೊಂದಿದೆ. ಅವರಲ್ಲಿ, ಅರ್ಧದಷ್ಟು ಮಂದಿ ಎಳೆಯ ಮಕ್ಕಳು, ಪತ್ರಕರ್ತರು, ಆರೋಗ್ಯ ಕಾರ್ಯಕರ್ತರು ಮತ್ತು ಮಾನವೀಯ ಸಹಾಯ ಕಾರ್ಯಕರ್ತರಾಗಿದ್ದಾರೆ. ಇಸ್ರೇಲ್ ಸೇನೆಯು ಆಸ್ಪತ್ರೆಗಳು, ಶಾಲೆಗಳು ಹಾಗೂ ನಿರಾಶ್ರಿತರ ಶಿಬಿರಗಳನ್ನು ಧ್ವಂಸಗೊಳಿಸಿದೆ. ಇಸ್ರೇಲ್‌ನ ಆಕ್ರಮಣವನ್ನು ನರಹಂತಕ ಕೃತ್ಯ ಮತ್ತು ಮಾರಣಹೋಮವೆಂದು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳಾದ ಆಮ್ನೆಸ್ಟಿ ಇಂಟರ್ನ್ಯಾಷನಲ್ ಮತ್ತು ಹ್ಯೂಮನ್ ರೈಟ್ಸ್ ವಾಚ್ ಕರೆದಿವೆ. ಅಂತಾರಾಷ್ಟ್ರೀಯ ನ್ಯಾಯಾಲಯ ಮತ್ತು ವಿಶ್ವಸಂಸ್ಥೆ ಮಾನವ ಹಕ್ಕುಗಳ ಉಲ್ಲಂಘನೆ ಎಂದು ಘೋಷಿಸಿವೆ. ಆದರೆ, ವಿಶ್ವಗುರು ಪ್ರಧಾನಿ ಮೋದಿ ಈವರೆಗೆ ತುಟಿಬಿಚ್ಚಿಲ್ಲ.

ತನ್ನ ಕೃತ್ಯವನ್ನು ಸಮರ್ಥಿಸಿಕೊಂಡಿರುವ ಇಸ್ರೇಲ್, ಇದೇ ಸಮಯದಲ್ಲಿ ವೆಸ್ಟ್ ಬ್ಯಾಂಕ್, ಲೆಬನಾನ್ ಹಾಗೂ ಇರಾನ್ ಜೊತೆಗೂ ಸಂಘರ್ಷಕ್ಕಿಳಿದು, ದಾಳಿ ನಡೆಸಿದೆ. ಅಮೆರಿಕ, ಇಸ್ರೇಲ್‌ಅನ್ನು ಮುಂದಿಟ್ಟುಕೊಂಡು ಮಧ್ಯಪ್ರಾಚ್ಯದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಲು ಹವಣಿಸುತ್ತಿದೆ.

2025ರಲ್ಲಿ ಇಸ್ರೇಲ್-ಇರಾನ್ ನಡುವೆ ಕದನ ವಿರಾಮಕ್ಕೆ ಕರೆಕೊಟ್ಟಿದ್ದ ಟ್ರಂಪ್, ಈಗ ಅದೇ ಇಸ್ರೇಲ್ ಜೊತೆ ಸೇರಿ ಇರಾನ್ ಮೇಲೆ ಯುದ್ಧ ಆರಂಭಿಸಿದ್ದಾರೆ. ಇರಾನ್ ಮೇಲೆ ಮ್ಯಾಕ್ಸಿಮಮ್ ಪ್ರೆಷರ್ (ಬಲವಂತದ ಒತ್ತಡ) ನೀತಿಯನ್ನು ಅನುಸರಿಸಿದ್ದಾರೆ. 2018ರಲ್ಲಿ ಟ್ರಂಪ್ ಇರಾನ್ ಜೊತೆಗಿನ ಅಣು ಒಪ್ಪಂದದಿಂದ ಹೊರಬಂದಿದ್ದರು. ಇರಾನ್ ಮೇಲೆ ಕಠಿಣ ನಿರ್ಬಂಧಗಳನ್ನು ಹೇರಿದ್ದರು. ಆದಾಗ್ಯೂ, ಮಾತುಕತೆಗಳು ಮುಂದುವರೆದಿದ್ದವು. ಈ ಚರ್ಚೆಗಳು ಅಂತಿಮಗೊಳ್ಳುತ್ತವೆ ಎಂಬ ಮುನ್ಸೂಚನೆ ಇದ್ದಾಗಲೇ ಇರಾನ್ ಮೇಲೆ ಇಸ್ರೇಲ್-ಅಮೆರಿಕ ದಾಳಿ ಮಾಡಿವೆ. ಇರಾನ್‌ನ ಪರಮೋಚ್ಚ ನಾಯಕ ಅಲಿ ಖಮೇನಿ ಅವರನ್ನು ಕೊಂದಿವೆ. ಈಗಲೂ ಮೋದಿ ಮೌನ ತೊರೆದಿಲ್ಲ.

ಒಂದೆಡೆ, ಮಧ್ಯಪ್ರಾಚ್ಯದ ಮೇಲಿನ ಹಿಡಿತಕ್ಕಾಗಿ ಇಸ್ರೇಲ್‌ಅನ್ನು ಅಮೆರಿಕ ಬಳಸಿಕೊಳ್ಳುತ್ತಿದೆ. ಮತ್ತೊಂದೆಡೆ, ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಿರಂತರ ದಾಳಿಯ ಮೊರೆಹೋಗಿರುವ ಇಸ್ರೇಲ್ ಪ್ರಧಾನಿ ನೆತನ್ಯಾಹು, ತನ್ನ ಅಧಿಕಾರ ದಾಹಕ್ಕೆ ಟ್ರಂಪ್ ಅವರನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಎರಡು ರಾಷ್ಟ್ರಗಳ ನಾಯಕರ ಸ್ವಾರ್ಥ ಮತ್ತು ಕ್ರೌರ್ಯಕ್ಕೆ ಬಹುತೇಕ ಅರ್ಧ ಜಗತ್ತು ತತ್ತರಿಸಿದೆ. ಇರಾನ್ ಮೇಲಿನ ಯುದ್ಧದ ಆರಂಭದಲ್ಲಿ ಟ್ರಂಪ್‌ಗೆ ಸಹಕರಿಸಿದ ಕೊಲ್ಲಿ ಮತ್ತು ಯುರೋಪಿಯನ್ ರಾಷ್ಟ್ರಗಳು ಈಗ ಟ್ರಂಪ್ ವಿರುದ್ಧ ನಿಲುವು ತಳೆಯುತ್ತಿವೆ. ಯುದ್ಧವನ್ನು ಕೊನೆಗಾಣಿಸುವಂತೆ ಒತ್ತಾಯಿಸುತ್ತಿವೆ. ಆದರೆ, ಮೋದಿ ಮೌನವಾಗಿಯೇ ಇದ್ದಾರೆ.

ಮೋದಿ ಅವರದ್ದು ಕೇವಲ ಮೌನವಲ್ಲ. ಇದು, ದಾರ್ಷ್ಟ್ಯದಿಂದ ಕೂಡಿದ ಜಾಣ ಮೌನ. ಮೋದಿ ಭಾರತದ ರಾಜತಾಂತ್ರಿಕತೆಯನ್ನೇ ಬದಲಿಸಿದ್ದಾರೆ. ಹಳೆಯ ಮಿತ್ರ ಇರಾನ್ ಮತ್ತು ರಷ್ಯಾವನ್ನು ತೊರೆದು, ಇಸ್ರೇಲ್ ಮತ್ತು ಅಮೆರಿಕ ಜೊತೆಗೆ ದೋಸ್ತಿ ಬೆಳೆಸಿದ್ದಾರೆ. ಈ ಎರಡು ರಾಷ್ಟ್ರಗಳ ಕ್ರೌರ್ಯದೊಂದಿಗೆ ಕೈಜೋಡಿಸಿದ್ದಾರೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿ ಆರಂಭವಾಗುವುದಕ್ಕೂ ಮೂರು ದಿನಗಳ ಮುಂಚೆ (ಫೆಬ್ರುವರಿ 25-26) ಮೋದಿ ಇಸ್ರೇಲ್ ಭೇಟಿ ನೀಡಿದ್ದರು. ನೆತನ್ಯಾಹುವನ್ನು ಆಲಿಂಗಿಸಿಕೊಂಡಿದ್ದರು. ಇಸ್ರೇಲ್ ಕ್ನೆಸೆಟ್‌ನಲ್ಲಿ ಮಾತನಾಡುವಾಗ, ಇಸ್ರೇಲ್ ನನ್ನ ಫಾದರ್‌ಲ್ಯಾಂಡ್ ಎಂದು ಕರೆದರು. ನೆತನ್ಯಾಹು ಮೋದಿಯನ್ನು ಸಹೋದರ ಎಂದು ಕೊಂಡಾಡಿದರು. ಇದೇ ವೇಳೆ ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯನ್ನು ಮೋದಿ ಖಂಡಿಸಿದರು. ಆದರೆ ಇಸ್ರೇಲ್, ಪ್ಯಾಲೆಸ್ತೀನಿಯರ ಮೇಲೆ ನಡೆಸಿದ ಕ್ರೌರ್ಯಕ್ಕೆ ಮೌನ ತಾಳಿದರು.

ಮೋದಿಯವರ ಇಸ್ರೇಲ್ ಭೇಟಿ ಮುಗಿಯುತ್ತಿದ್ದಂತೆಯೇ ಇರಾನ್ ಮೇಲೆ ಇಸ್ರೇಲ್-ಅಮೆರಿಕ ದಾಳಿ ನಡೆಸಿದವು. ಖಮೇನಿ ಅವರನ್ನು ಕೊಂದವು. ಆದರೆ, ಈ ದಾಳಿಯನ್ನು ಮೋದಿ ನೇರವಾಗಿ ಖಂಡಿಸಲಿಲ್ಲ; ಬದಲಿಗೆ ಮೌನಕ್ಕೆ ಜಾರಿದರು. ಸುಮಾರು ಆರು-ಏಳು ದಿನಗಳ ನಂತರವಷ್ಟೇ ಖಮೇನಿ ಹತ್ಯೆಯನ್ನು ಖಂಡಿಸಿ, ಸಂತಾಪ ಸೂಚಿಸಿದರು.

ಮೋದಿಯವರ ಮೌನವನ್ನು ಟೀಕಿಸಿರುವ ವಿಪಕ್ಷಗಳು ಭಾರತದ ಮೌಲ್ಯಗಳಿಗೆ ದ್ರೋಹವೆಂದು ಕರೆದಿವೆ. ಮೋದಿ ಇಸ್ರೇಲ್ ಪರ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾರೆ ಎಂದು ಖಂಡಿಸಿವೆ. ಮೋದಿ ಅವರು ಟ್ರಂಪ್‌ಗೆ ಹೆದರಿದ್ದಾರೆ ಮತ್ತು ಇಸ್ರೇಲ್ ಪರವಾಗಿ ನಿಂತಿದ್ದಾರೆ ಹಾಗೂ ಭಾರತದ ಐತಿಹಾಸಿಕ ನಿಷ್ಪಕ್ಷಪಾತ ನೀತಿಗೆ ವಿರುದ್ಧವಾಗಿ ನಡೆಯುತ್ತಿದ್ದಾರೆ ಎಂದು ಆರೋಪಿಸಿವೆ. ಇದೆಲ್ಲವೂ ಮೋದಿ ಅವರ ಸಣ್ಣತನ ಮತ್ತು ಹೇಡಿತನ ಎಂದು ಹಲವರು ಕರೆದಿದ್ದಾರೆ.

ಭಾರತದ ವಿದೇಶಾಂಗ ನೀತಿ ಮತ್ತು ಪ್ರಧಾನಿ ಮೋದಿಯವರ ನಿಲುವು, ತಮ್ಮ ವಿರುದ್ಧವಿದೆ ಎಂಬುದನ್ನು ಇರಾನ್ ಗಮನಿಸಿದೆ. ಅಮೆರಿಕ-ಇಸ್ರೇಲ್ ಧೋರಣೆಯನ್ನು ಖಂಡಿಸಲಾಗದ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ, 5ನೇ ದೊಡ್ಡ ಆರ್ಥಿಕ ಶಕ್ತಿ, ಪರಮಾಣು ಶಕ್ತಿ ಮತ್ತು ಪ್ರಬಲ ಮಿಲಿಟರಿ ಶಕ್ತಿ ಹೊಂದಿರುವ ಭಾರತದ ದ್ವಂದ್ವನೀತಿಯನ್ನು ಇರಾನ್ ಅಣಕಿಸಿದೆ. ಆದಾಗ್ಯೂ, ಇರಾನ್ ಭಾರತದೊಂದಿಗಿನ ಐತಿಹಾಸಿಕ ಸಂಬಂಧಗಳನ್ನು ಗೌರವಿಸಿದೆ. ತನ್ನ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿ ಮೂಲಕ ಭಾರತೀಯ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ.

ಇರಾನ್ ರಾಯಭಾರಿ ಮೊಹಮ್ಮದ್ ಫತಲಿ ಅವರು, ಭಾರತ ನಮ್ಮ ಸ್ನೇಹಿತ ಎಂದು ಹೇಳಿದ್ದು, ಹಾರ್ಮುಜ್ ಜಲಸಂಧಿಯಲ್ಲಿ ಭಾರತದ ಹಡಗುಗಳ ಮುಕ್ತ ಸಂಚಾರದ ಅವಕಾಶವನ್ನು ಘೋಷಿಸಿದ್ದಾರೆ. ಸಂಘರ್ಷದ ಸಮಯದಲ್ಲೂ ಭಾರತದ ಆರ್ಥಿಕ ಹಿತಾಸಕ್ತಿಗಳನ್ನು ಇರಾನ್ ಗೌರವಿಸಿದೆ. ಇದು ಇರಾನ್‌ನ ದೊಡ್ಡತನ. ಮಾತ್ರವಲ್ಲ, ಮೋದಿಯ ಇಸ್ರೇಲ್ ಪರ ಧೋರಣೆಯ ಹೊರತಾಗಿಯೂ, ಇರಾನ್ ಭಾರತದೊಂದಿಗೆ ಸಹಕಾರವನ್ನು ಮುಂದುವರಿಸುವ ಇಚ್ಛೆ ಹೊಂದಿರುವುದನ್ನು ಸೂಚಿಸುತ್ತದೆ.

ಮೋದಿ ಅವರ ಪಕ್ಷಪಾತಿ, ಅಂಜುಬುರುಕತನ, ಸಣ್ಣತನವನ್ನು ಇರಾನ್ ತನ್ನ ದೊಡ್ಡತನದಿಂದ ಮಣಿಸಿದೆ. ಈಗಲಾದರೂ, ಮೋದಿ ಅವರು ಟ್ರಂಪ್ ಎದುರು ಕೈಕಟ್ಟಿ ನಿಲ್ಲುವುದನ್ನು ಬಿಟ್ಟು, ಹಂತಕ ಇಸ್ರೇಲ್‌ನ ಆಲಿಂಗನದಿಂದ ಬಿಡಿಸಿಕೊಂಡು ಭಾರತದ ನಿಷ್ಪಕ್ಷಪಾತ ನೀತಿಯೊಂದಿಗೆ ನಿಲ್ಲಬೇಕು. ಉತ್ತಮ ವಿದೇಶಾಂಗನೀತಿಗೆ ಒತ್ತುಕೊಡಬೇಕು. ಭಾರತವು ಕ್ರೌರ್ಯವನ್ನು ಸಹಿಸುವುದಿಲ್ಲ, ಶಾಂತಿಯಿಂದ ಹಿಂದೆ ಸರಿಯುವುದಿಲ್ಲ ಎಂಬ ನಿಲುವನ್ನು ಒತ್ತಿ ಹೇಳಬೇಕು. ಆದರೆ, ಪ್ರಧಾನಿ ಮೋದಿಯವರು, ಟ್ರಂಪ್ ಎದುರು ತಮ್ಮ 56 ಇಂಚಿನ ಎದೆ ಉಬ್ಬಿಸಿ ನಿಲ್ಲುವ ಧೈರ್ಯ ತೋರುವರೇ?

ಯುಪಿ ಚುನಾವಣೆ ಹೊಸ್ತಿಲಲ್ಲಿ ಕಾಂಶೀರಾಮ್ ಭಜನೆಗೆ ತೊಡಗಿದ ಪಕ್ಷಗಳು!

ಮುಂದಿನ ವರ್ಷ ಉತ್ತರ ಪ್ರದೇಶದ ವಿಧಾನಸಭೆಗೆ ಚುನಾವಣೆಗಳು ನಡೆಯಲಿವೆ. ಮಾಯಾವತಿ ರಾಜಕೀಯವಾಗಿ ದುರ್ಬಲರಾಗಿ ಕಾಣಿಸಿರುವ ಈ ಹಂತದಲ್ಲಿ ಕಾಂಶೀರಾಮ್ ಅವರ ಪರಂಪರೆಗೆ ದಾವೇದಾರಿಕೆಗೆ ಬಿ.ಎಸ್.ಪಿ. ಹೊರಗೆ ಪೈಪೋಟಿ ನಡೆದಿದೆ. ಮಾಯಾವತಿ ಅವರು ರಾಜಕೀಯವಾಗಿ ಇಳಿಜಾರಿನ ಹಾದಿ ಹಿಡಿದು ಬಹುಕಾಲವಾಗಿದೆ. ಮಾಯಾವತಿ ಅವರು ತಮ್ಮ ನಡೆ-ನುಡಿಯ ಸೂತ್ರವನ್ನು ಮೋಶಾ ಯುಗದ ಬಿಜೆಪಿಯ ಕೈಗೆ ಒಪ್ಪಿಸಿದ್ದಾರೆ ಎನ್ನುವ ಗ್ರಹಿಕೆ ವರ್ಷದಿಂದ ವರ್ಷಕ್ಕೆ ಗಟ್ಟಿಯಾಗುತ್ತ ನಡೆದಿದೆ.

ಜವಾಹರಲಾಲ್ ನೆಹರೂ ಬದುಕಿದ್ದಿದ್ದರೆ, ಕಾಂಶೀರಾಮ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿ ಮಾಡುತ್ತಿದ್ದರು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧೀ ಹೇಳಿದ್ದಾರೆ.

ಕಾಂಶೀರಾಮ್ ಅವರ ಹುಟ್ಟಿದ ದಿನದ ಆಚರಣೆಯ ಸಲುವಾಗಿ ಲಖ್ನೋದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಂವಿಧಾನ ಸಮ್ಮೇಳನದಲ್ಲಿ ಭಾಗವಹಿಸಿ ಈ ಮಾತುಗಳನ್ನು ರಾಹುಲ್ ಆಡಿದ್ದಾರೆ.

ಗತಕಾಲದಲ್ಲಿ ಸಾಮಾಜಿಕ-ರಾಜಕೀಯ ವಲಯದ ಕಾಂಗ್ರೆಸ್ ಪಕ್ಷ ಮಾಡಿದ ತಪ್ಪು ನಡೆಗಳೇ ಕಾಂಶೀರಾಮ್ ಅವರ ರಾಜಕೀಯ ಯಶಸ್ಸಿಗೆ ದಾರಿ ಮಾಡಿಕೊಟ್ಟಿತು ಎಂದು ಅವರು ತಮ್ಮ ಪಕ್ಷವನ್ನು ಆತ್ಮಚಿಂತನೆಗೆ ಹಚ್ಚಿದ್ದಾರೆ.

ಜಾತಿಜನಗಣತಿಗೆ ತಮ್ಮ ಪ್ರತಿಬದ್ಧತೆಯನ್ನು ಪುನರುಚ್ಚರಿಸಿದ ರಾಹುಲ್, ತಮ್ಮ ಕಡೆಯ ಉಸಿರಿನ ತನಕ ದೇಶದ ಸಂವಿಧಾನವನ್ನು ರಕ್ಷಿಸುವುದಾಗಿ ಸಾರಿದ್ದಾರೆ.

ನೆಹರೂ 1964ರಲ್ಲಿ ತೀರಿಹೋದರು. ಕಾಂಶೀರಾಮ್ ಅವರು ಬಾಮ್ಸೆಫ್ ಸಂಘಟನೆಯಿಂದ ರಾಜಕೀಯ ಆಗಸದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡದ್ದು 1978ರಲ್ಲಿ. ನಂತರ ಬಹುಜನ ಪಾರ್ಟಿಯನ್ನು ಸ್ಥಾಪಿಸಿದ್ದು 1984ರಲ್ಲಿ. 2006ರಲ್ಲಿ ತೀರಿ ಹೋದಾಗ ಕಾಂಶೀರಾಮ್ ವಯಸ್ಸು 72. ಅನಾರೋಗ್ಯ ಅವರನ್ನು ಅತೀವವಾಗಿ ಬಳಲಿಸಿ ಹಣ್ಣುಮಾಡಿತ್ತು. ಪಕ್ಷವನ್ನು ಕಟ್ಟುವುದರಲ್ಲೇ ಬದುಕು ಸವೆಸಿದ ಕಾಂಶೀರಾಮ್, ಮುಖ್ಯ ಮಂತ್ರಿ ಯಂತಹ ಪದವಿಗಳನ್ನು ಮಾಯಾ ವತಿ ಅವರಿಗೇ ಬಿಟ್ಟುಕೊಟ್ಟದ್ದವರು. ಹಲವು ಸಲ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಕುಮಾರಿ ಮಾಯಾವತಿ ಕಾಂಶೀರಾಮ್ ಬೆಳೆಸಿ ರೂಪಿಸಿದ ರಾಜಕಾರಣಿ. ಕಾಂಗ್ರೆಸ್ ಜೊತೆ ಬಿ.ಎಸ್.ಪಿ. ಸಂಬಂಧ ಯಾವ ಹಂತದಲ್ಲೂ ಗಟ್ಟಿಯಾಗಿರಲಿಲ್ಲ. ನಂಬಿಕೆ ವಿಶ್ವಾಸದ ಕಂದಕ ದೊಡ್ಡದಿತ್ತು.

ಮಾಯಾವತಿ ಅವರು ರಾಜಕೀಯವಾಗಿ ಇಳಿಜಾರಿನ ಹಾದಿ ಹಿಡಿದು ಬಹುಕಾಲವಾಗಿದೆ. ಮಾಯಾವತಿ ಅವರು ತಮ್ಮ ನಡೆ-ನುಡಿಯ ಸೂತ್ರವನ್ನು ಮೋಶಾ ಯುಗದ ಬಿಜೆಪಿಯ ಕೈಗೆ ಒಪ್ಪಿಸಿದ್ದಾರೆ ಎನ್ನುವ ಗ್ರಹಿಕೆ ವರ್ಷದಿಂದ ವರ್ಷಕ್ಕೆ ಗಟ್ಟಿಯಾಗುತ್ತ ನಡೆದಿದೆ.

ಮುಂದಿನ ವರ್ಷ ಉತ್ತರ ಪ್ರದೇಶದ ವಿಧಾನಸಭೆಗೆ ಚುನಾವಣೆಗಳು ನಡೆಯಲಿವೆ. ಮಾಯಾವತಿ ರಾಜಕೀಯವಾಗಿ ದುರ್ಬಲರಾಗಿ ಕಾಣಿಸಿರುವ ಈ ಹಂತದಲ್ಲಿ ಕಾಂಶೀರಾಮ್ ಅವರ ಪರಂಪರೆಗೆ ದಾವೇದಾರಿಕೆಗೆ ಬಿ.ಎಸ್.ಪಿ. ಹೊರಗೆ ಪೈಪೋಟಿ ನಡೆದಿದೆ.

ತಾವು ನಂಬಿದ ತತ್ವಸಿದ್ಧಾಂತಗಳೊಂದಿಗೆ ಕಾಂಶೀರಾಮ್ ಎಂದೆಂದಿಗೂ ರಾಜೀ ಮಾಡಿಕೊಳ್ಳಲಿಲ್ಲ ಎಂದಿರುವ ರಾಹುಲ್ ಗಾಂಧೀ, ಈ ಮಹಾನ್ ದಲಿತ ನಾಯಕನನ್ನು ಗಾಂಧೀ ಮತ್ತು ಅಂಬೇಡ್ಕರ್ ಜೊತೆ ಹೋಲಿಸಿದ್ದಾರೆ. ನಾರಾಯಣಗುರು, ಬಸವಣ್ಣ, ಅಂಬೇಡ್ಕರ್ ಹಾಗೂ ಗೌತಮ ಬುದ್ಧನಂತಹ ಮಹಾನ್ ಮಾನವತಾವಾದಿಗಳು ಸಾರಿದ ಮೌಲ್ಯಗಳನ್ನು ಸಂವಿಧಾನದಲ್ಲಿ ಅಡಕಗೊಳಿಸಲಾಗಿದೆ. ಸಂವಿಧಾನದ ಈ ಸಿದ್ಧಾಂತಗಳನ್ನು ಮೋದಿ ಎಂದಿಗೂ ನಂಬಿಲ್ಲ ಎಂದಿದ್ದಾರೆ.

ಕಾಂಶೀರಾಮ್ ಪುಣ್ಯತಿಥಿಯ ಸಂದರ್ಭದಲ್ಲಿ ಅವರ ರಾಜಕೀಯ ಹೋರಾಟದ ಪರಂಪರೆಗೆ ದಾವೆ ಹೂಡಿರುವ ಮತ್ತೊಬ್ಬ ರಾಜಕಾರಣಿ ಸಂಸದ ಚಂದ್ರಶೇಖರ ಆಝಾದ್ ರಾವಣ. ಅವರ ಪಕ್ಷದ ಹೆಸರು ಆಜಾದ್ ಸಮಾಜ ಪಾರ್ಟಿ (ಕಾಂಶೀರಾಮ್). 2020ರಲ್ಲೇ ಸ್ಥಾಪಿಸಲಾಗಿತ್ತು.

ಅವನತಿಯ ಹಾದಿ ಹಿಡಿದಿರುವ ಮಾಯಾವತಿಯವರ ಬಿ.ಎಸ್.ಪಿ. 2009ರಲ್ಲಿ ಶೇ.27ರಷ್ಟು ಮತ ಗಳಿಸಿತ್ತು. 2024ರ ಹೊತ್ತಿಗೆ ಈ ಪ್ರಮಾಣ ಶೇ.10ಕ್ಕೆ ಕುಸಿಯಿತು. 2022ರ ಉತ್ತರಪ್ರದೇಶ ವಿಧಾನ ಸಭಾ ಚುನಾವಣೆಗಳಲ್ಲಿ ಶೇ.13ರಷ್ಟು ಮತ ಗಳಿಸಿ ನಾಲ್ಕನೆಯ ಸ್ಥಾನಕ್ಕೆ ಜಾರಿತು. 2024ರ ಲೋಕಸಭಾ ಚುನಾವಣೆಗಳಲ್ಲಿ ಪ್ರತಿಪಕ್ಷಗಳ ಕೂಟ ಇಂಡಿಯಾ ಬಣ ಮತ್ತು ಆಡಳಿತ ಪಕ್ಷಗಳ ಬಣ ಎನ್.ಡಿ.ಎ. ಎರಡರಿಂದಲೂ ದೂರ ಕಾಯ್ದುಕೊಳ್ಳುವುದಾಗಿ ಸಾರಿದ್ದರು. ಒಂದು ಸೀಟನ್ನೂ ಗೆಲ್ಲದೆ ಹೋದರು. ಅವರ ಮತಗಳ ತಳಹದಿ ಎನಿಸಿದ್ದ ಜಾಟವೇತರ ದಲಿತರು ಸಮಾಜವಾದಿ-ಕಾಂಗ್ರೆಸ್ ಮೈತ್ರಿಕೂಟದತ್ತ ಗುಳೆ ಹೋಗಿದ್ದೇ ಈ ಐತಿಹಾಸಿಕ ಕುಸಿತಕ್ಕೆ ಕಾರಣ ಎಂಬುದು ರಾಜಕೀಯ ಪಂಡಿತರ ವಿಶ್ಲೇಷಣೆ.

ಸಿಲಿಂಡರ್ ಸಿಗುತ್ತಿಲ್ಲ- ಪರ್ಯಾಯ ಮಾರ್ಗಗಳೇನು? ಇಲ್ಲಿದೆ ನೋಡಿ...

ಅಡುಗೆ ಮಾಡುವುದಕ್ಕೆ ಎಲ್‌ಪಿಜಿ ಸಿಲಿಂಡರ್ ಉತ್ತಮ ಆಯ್ಕೆ. ಆದರೆ ಯುದ್ಧ ಅಥವಾ ಇನ್ನಿತರ ಅವಘಡಗಳು ಸಂಭವಿಸಿದಾಗ ಎಲ್‌ಪಿಜಿ ಸಿಲಿಂಡರ್ ಸಿಗುವುದು ಕಷ್ಟ ಅನಿಸಿದಾಗ, ನಾವು ಕೈ ಚೆಲ್ಲಿ ಕೂರಬೇಕಾಗಿಲ್ಲ. ಮೇಲೆ ತಿಳಿಸಿದ ಪರ್ಯಾಯ ಮಾರ್ಗಗಳತ್ತ ನೋಡಬಹುದು. ಅಂತಹ ಕೆಲವು ಮಾರ್ಗಗಳು ಇಲ್ಲಿವೆ...

ಯುದ್ಧ ನಡೀತಿದೆಯಂತೆ ಅದಕ್ಕೆ ಸಿಲಿಂಡರ್ ಸಿಗ್ತಿಲ್ವಂತೆ ಎನ್ನುವುದು ಎಲ್ಲಾ ಕಡೆ ಕೇಳಿಬರುತ್ತಿರುವ ಮಾತು. ಸಿಲಿಂಡರ್ರನ್ನೇ ನೆಚ್ಚಿ ಕೂತರೆ, ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳಬೇಕು. ಹಾಗಂತ ಸುಮ್ಮನಿರಲೂ ಸಾಧ್ಯವಿಲ್ಲ. ಈ ಸಂದಿಗ್ಧ ಪರಿಸ್ಥಿತಿಯನ್ನು ನಿಭಾಯಿಸುವ ಪರ್ಯಾಯ ಮಾರ್ಗಗಳತ್ತ ಇಲ್ಲಿ ವಿವರಿಸಲಾಗಿದೆ.

ಕಮಲಮ್ಮ: ನಿಂಗಕ್ಕ ನಮ್ಮಲ್ಲಂತೂ ಸಿಲಿಂಡ್ರು ಮುಗಿಯಕೆ ಬಂದ್ಯೆತೆ. ಏನು ಮಾಡೋದು ಆಮೇಲೆ ಅಂತ ತಲೇನೇ ಓಡ್ತ ಇಲ್ಲವ ನಂಗೆ. ಹೋಟ್ಲಲೂ ಊಟ ತಿಂಡಿ ಸಿಗ್ತಿಲ್ಲ. ಒಂದು ಪ್ಲೇಟ್ ಇಡ್ಲಿಗೆ 80 ರೂಪಾಯಂತೆ. ಗ್ಯಾಸ್ ಚಾರ್ಜ್‌ನೂ ತಿಂಡಿ ಮೇಲೆ ಹಾಕ್ತಾವ್ರಂತೆ. ಇಂಗಾದ್ರೆ, ಹೊರಗಿಂದ ತಂದು ತಿನ್ನಕಾಯ್ತದ. ಏನು ಮಾಡೋದು ಅನ್ನೋದೇ ಚಿಂತೆ ಆಯಿತವ್ವ.

ನಿಂಗಕ್ಕ: ಅದ್ಯಾಕೆ ಯೋಚನೆ ಮಾಡ್ತಿಯ. ಊರಲ್ಲೆಲ್ಲ ಸೌದೆ ಒಲೇಲಿ ಅಡುಗೆ ಮಾಡ್ತಿರಲಿಲ್ವ, ಇಲ್ಲೂ ಅಂಗೆ ಒಂದು ಸೌದೆ ಒಲೆ ತರದು, ಅದ್ರಲೆ ಬೇಸ್ಕೆಂಡು ತಿನ್ನದು. ಇನ್ನೇನಾಮ್ಮಡಕಾಗುತ್ತೆ.

ಕಮಲಮ್ಮ: ಅಂಗಲ್ಲ ನಿಂಗಕ್ಕ, ಒಲೆ ತರದು ಹಾಳಾಗೋಗ್ಲಿ ತಂದ್ರಾಗುತ್ತೆ. ಅದಕ್ಕೆ ಸೌದೆ ಎಲ್ಲಿ ಹೊಂಚನಾ ಏನು ಹಳ್ಳಿಯಾ ಇದು? ತ್ವಾಟದ ಕಡಿಕೆ ಹೋಗಿ ಒಂದೊರೆ ಸೌದೆ ತಂದು ಹಾಕ್ಯಂಡ್ರೆ ಆಗುತ್ತೆ ಬುಡು ಅನ್ನಕೆ. ಇದು ಬೆಂಗ್ಳೂರು ಕಣವ, ಮೊದಲೇ ಬಾಡಿಗೆ ಮನೆಲೆ ಬದುಕ್ತ ಇದೀವಿ. ಇಲ್ಲಿ ಒಂದು ಮಳೆ ಒಡ್ಯಾಕೆ ಬುಡಕುಲ, ಇನ್ನ ಸೌದೆ ತಂದು ಒಲೆ ಹಾಕ್ಯಂಡು ಅಡುಗೆ ಮಾಡಕೆ ಬುಡ್ತರಾ? ಅಂಗೇನಾರಾ ಬುಟ್ರೂ ಅಂದ್ಕ, ಆಗ ಎಲ್ಲಿಂದ ಸೌದೆ ತರನಾ ಹೇಳು?

ನಿಂಗಕ್ಕ: ನೋಡು ಕಮಲಮ್ಮ, ಬೆಂಗ್ಳೂರಲ್ಲಿ ಪಾರ್ಕ್‌ಗಳಿಗೆ ಹೋಗಿ ಪುಳ್ಳೆ ಗಿಳ್ಳೆ ಆಯ್ಕೊಂಡು ಬಂದು ಬೇಸ್ಕಂಡು ತಿಂದ್ರಾಗತ್ತೆ ತಗ. ಇಲ್ದೆ ಹೋದ್ರೆ ಕರೆಂಟಿನವು ಎಂತೆಂಥವೋ ಇದಾವಲ್ಲ ಅವುನ್ನೇ ತಂದುಕಳದು ಇನ್ನೇನು ಮಾಡದು ಉಪಾಸ ಇರಕಾಯ್ತದಾ?

ಕಮಲಮ್ಮ: ನಿಂಗಕ್ಕ ತಡಿ, ನಮ್ಮ ಪಕ್ಕದ ಮನೆಗೆ ಒಬ್ರು ಬಾಡಿಗೆ ಬಂದವ್ರೆ, ಅವರ ಮಲ್ಲಿ ಏನೇನೋ ಸಾಮಾನು ಇಟ್ಕಂಡಿದ್ರವ ಅವ್ರ, ಕೇಳಿದ್ರೆ ಗೊತ್ತಾಯ್ತದೆ ಅವರ ಮಲ್ಲಿ ಅಡುಗೆ ಮಾಡಕೆ ಸಿಲಿಂಡ್ರು ಇಲ್ದಹೋದ್ರೆ ಏನಾಮ್ಮಡ್ತರೆ ಅಂತ ಕೇಳನ ನಾವೂ ಅಂಗೆ ಮಾಡಿದ್ರಾಗುತ್ತೆ ಅಲ್ವಾ

ನಿಂಗಕ್ಕ: ಹ್ಞೂಂ ಕಮಲಮ್ಮ ಅವರನ್ನೇ ಕೇಳು ಅಂಗಾರೆ. ನಾವೂ ಅಂಗೆ ಮಾಡಿದ್ರಾಗುತ್ತೆ.

ಕಮಲಮ್ಮ: ಸ್ನೇಹಾ, ಈಗ ಎಲ್ಲೂ ಸಿಲಿಂಡ್ರು ಸಿಕ್ಕಕುಲ ಅಂತೌರಲ, ನಿಮ್ಮನೇಲಿ ಏನಾಮ್ಮಡ್ತಿರವ ಅಡುಗೆ ಮಾಡಕೆ

ಸ್ನೇಹಾ: ಅಯ್ಯೋ, ನೋಡಿ ಅಮ್ಮ, ಈಗ ನಮ್ಮನೇಲಿ ಇಂಡಕ್ಷನ್ ಸ್ಟವ್ ಇದೆ. ಒಬ್ಬರಿಗೆ ಕಾಫಿ, ಟೀ ಮಾಡಿಕೊಳ್ಳೋದಾದರೆ ಇರಲಿ ಅಂತ ತಂದಿದ್ದೆ. ಮನೆಲಿ ಜನ ಜಾಸ್ತಿ ಆದಮೇಲೆ ಅದನ್ನು ಒಂದುಕಡೆ ಎತ್ತಿ ಇಟ್ಟಿದ್ದೆ. ಈಗ ಯಂಗೂ ಸಿಲಿಂಡರ್ ಖಾಲಿಯಾಗಂಗಿದೆ. ಕರೆಂಟ್ ಸ್ಟವ್‌ನೇ ಬಳಸ್ತಿನಿ. ಇದರಲ್ಲಿ ಟೀ, ಕಾಫಿ, ಅನ್ನ, ಸಾರು ಎಲ್ಲನೂ ಮಾಡಬಹುದು. ಇದಲ್ಲದೆ, ಇನ್ನೂ ಬೇರೆ ರೀತೀಲೂ ಅಡುಗೆ ಮಾಡ್ಕೋಬಹುದು ಎಂದು ಪರ್ಯಾಯ ಮಾರ್ಗಗಳತ್ತ ವಿವರಿಸತೊಡಗಿದರು.

ಇಂಡಕ್ಷನ್ ಕುಕ್‌ಟಾಪ್‌ಗಳು: ಇಂಡಕ್ಷನ್ ಸ್ಟವ್ ಸ್ಟವ್‌ಗಿಂತ ಚನಾಗ್ಯವೆ. ಕರೆಂಟ್ ಬಳಸಿ ಅಡುಗೆ ಮಾಡಿಕೊಳ್ಳಬಹುದು. ಕೆಟಲ್ ಇದ್ದರೆ, ಹಾಲು, ನೀರು ಕುದಿಸಿಕೊಳ್ಳಬಹುದು. ಬೇಗ ಕೆಲಸನೂ ಆಗುತ್ತೆ ಗ್ಯಾಸ್ ಅವಶ್ಯಕತೆಯೂ ಇಲ್ಲ.

ಇಂಡಕ್ಷನ್ ಸ್ಟವ್

ಇದರಲ್ಲಿ ಯಾವ್ಯಾವ ಅಡುಗೆಗೆ ಎಷ್ಟೆಷ್ಟು ನಿಮಿಷ ಅಂತ ನಮಗೆ ಹೇಗೆ ಬೇಕು ಹಾಗೆ ಟೈಮ್ ಸೆಟ್ ಮಾಡಿಕೊಬಹುದು. ಇದು ದಿನಾ ಅಡುಗೆ ಮಾಡೋಕೆ ಅನುಕೂಲ ಆಗುತ್ತೆ.

ಎಲೆಕ್ಟ್ರಿಕ್ ಪ್ರೆಶರ್ ಕುಕ್ಕರ್‌ಗಳು: ಕರೆಂಟ್ ಕುಕ್ಕರ್‌ಗಳು ಇವೆ. ಅದರಲ್ಲಿ ಒಂದು ಪಾತ್ರೆ ಇರುತ್ತೆ. ಅದಕ್ಕೆ ಅನ್ನ, ಬೇಳೆ, ತರಕಾರಿಗಳು ಎಲ್ಲನೂ ಹಾಕಿ ಇಟ್ಟು ಸ್ವಿಚ್ ಹಾಕಿದ್ರೆ, ಅನ್ನ ಆದಮೇಲೆ ಅದರ ಪಾಡಿಗೆ ಅದು ಆಫ್ ಆಗುತ್ತೆ. ಅಷ್ಟೇ ಅಲ್ಲ ಇದರಲ್ಲಿ ಬಿರಿಯಾನಿನೂ ಬೇಯಿಸಬಹುದು. ಇದೊಂದ್ರಲ್ಲೇ ಹಲವಾರು ರೀತಿಯ ಅಡುಗೆಗಳನ್ನು ಮಾಡಿಕೊಳ್ಳಬಹುದು. ಸಮಯವೂ ಉಳಿಯುತ್ತೆ ಗ್ಯಾಸ್ ಕೂಡ ಬೇಕಾಗಿಲ್ಲ.

ಎಲೆಕ್ಟ್ರಿಕಲ್ ಪ್ರೆಷರ್ ಕುಕ್ಕರ್

ಮೊದಲಿಗೆ ಅಕ್ಕಿ, ಕಡಲೆಕಾಳನ್ನು ಒಂದು 30 ನಿಮಿಷ ನೆನೆಸಿಟ್ಟಿದ್ರೆ ಬೇಗ ಬೆಂದುಬಿಡ್ತವೆ. ಆಗ ಸಮಯಕ್ಕೆ ಸರಿಯಾಗಿ ಅಡುಗೆನೂ ಮಾಡಿಕೊಳ್ಳಬಹುದು.

ಮೈಕ್ರೋ ಓವನ್: ಮೈಕ್ರೋವೇವ್ ಓವನ್‌ಗಳಲ್ಲಿ ಬಿಸಿ ಮಾಡಬಹುದು, ಬೇಯಿಸಬಹುದು, ಗ್ರಿಲ್ ಮಾಡಬಹುದು. ಅಲ್ಲದೆ ತಿಂಡಿ(ಬ್ರೆಡ್, ಬನ್ನು, ಬಿಸ್ಕಟ್ಸ್)ಗಳನ್ನೂ ಮಾಡಬಹುದು. ಇದರಿಂದ ವೇಗವಾಗಿಯೂ ಅಡುಗೆ ಆಗುತ್ತೆ, ಚೆನ್ನಾಗಿದೆ.

ಏರ್ ಫ್ರೈಯರ್‌ಗಳು ಮತ್ತು ಮೈಕ್ರೋವೇವ್ ಓವನ್

ಅಷ್ಟೇ ಅಲ್ಲ, ಏರ್ ಫ್ರೈಯರ್ ಬಳಸೋದ್ರಿಂದ ಅಡುಗೆ ಎಣ್ಣೆ ಹಾಕದೇ ತರಕಾರಿಗಳನ್ನು ಫ್ರೈ ಮಾಡಬಹುದು. ಬೇಗ ಅಡುಗೆ ಆಗುತ್ತೆ. ಹೆಚ್ಚಿನ ಮನೆಗಳಲ್ಲಿ ಈಗಾಗಲೇ ಮೈಕ್ರೋವೇವ್‌ನಲ್ಲಿ ಸ್ಟೀಮಿಂಗ್ ಅಥವಾ ರೆಡಿ-ಟು-ಈಟ್‌ನಂತಹ ಅಡುಗೆಗಳನ್ನು ಕ್ವಿಕ್ ಆಗಿ ಮಾಡೋಕೆ ಶುರು ಮಾಡಿದರೆ ತುಂಬಾ ಅನುಕೂಲ ಆಗುತ್ತೆ. ಇವೆಲ್ಲವೂ ಹೋಮ್ ಅಪ್ಲೈಯನ್ಸ್ ಸ್ ಅಥವಾ ದೊಡ್ಡ ದೊಡ್ಡ ಪಾತ್ರೆ ಅಂಗಡಿಗಳಲ್ಲಿ ಸಿಗ್ತವೆ. ಇವುಗಳಿಗೆ ಒಂದ್ಸಲ ಬಂಡವಾಳ ಹಾಕೊಂಡು ತಂದ್ರೆ, ಇವು ದೀರ್ಘ ಕಾಲದವರೆಗೆ ಬಳಕೆಗೆ ಬರುತ್ತವೆ ಎಂದು ಹೇಳಿದ ಸ್ನೇಹಾ ಪರ್ಯಾಯ ಉಪಕರಣಗಳ ಬಗ್ಗೆ ತಿಳಿಸಿಕೊಟ್ಟರು.

ಸ್ವಿಚ್ ಅಂದ್ರೆ ಪೈಪ್ಡ್ ನ್ಯಾಚುರಲ್ ಗ್ಯಾಸ್(ನೈಸರ್ಗಿಕ ಹಸಿರು ಅನಿಲ) ಬಳಕೆ ಮಾಡ್ತರೆ. ಅಂದ್ರೆ ಅದು ಸಿಲಿಂಡ್ರಲ್ಲ. ನೈಸರ್ಗಿಕ ಹಸಿರು ಅನಿಲ ಅಂತ ಹೇಳ್ತರೆ. ಅದನ್ನು ನೇರವಾಗಿ ಪೈಪ್‌ಲೈನ್ ಮೂಲಕ ನಮ್ಮ ಮನೆಗಳಿಗೆ ಕನೆಕ್ಷನ್ ಕೊಡ್ತರೆ. ಅದಕ್ಕೆ ಕೆಲವು ಪ್ರೋಸೆಸ್ ಇವೆ. ಅವುಗಳನ್ನು ಮಾಡಿಸಿದ್ರೆ ಸಿಲಿಂಡರ್ ಇಲ್ಲ. ತರೋಕೆ ಏಜೆನ್ಸಿಗೆ ಕಾಲ್ ಮಾಡಬೇಕು ಅನ್ನೋ ಯಾವುದೇ ತಲೆನೋವು ಇರೋದಿಲ್ಲ. ಅಲ್ಲದೆ ಅದು ಹೂಡಿಕೆಗೆ ಯೋಗ್ಯವಾಗಿದೆ. ಇದು ಅಕ್ಷರಶಃ '' '' ವ್ಯವಸ್ಥೆಯಾಗಿದೆ. ಅಲ್ಲದೆ ಹೆಚ್ಚು ಸುರಕ್ಷಿತ ಮತ್ತು ಅಗ್ಗವಾಗಿದೆ. ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಅಥವಾ ಇತರ ಕಂಪನಿಗಳು ಅಪ್ಲೈ ಮಾಡುತ್ತವೆ.

ಆಧಾರ್ ಕಾರ್ಡ್, ವಿಳಾಸ ಪುರಾವೆ(ಎಲೆಕ್ಟ್ರಿಸಿಟಿ ಬಿಲ್/ರೇಷನ್ ಕಾರ್ಡ್), ಮನೆ ಒಡೆತನದ ಪುರಾವೆ(ಖಾತಾ ಪುಸ್ತಕ/ಪ್ರಾಪರ್ಟಿ ಟ್ಯಾಕ್ಸ್), ಪಾಸ್‌ಪೋರ್ಟ್ ಸೈಜ್ ಫೋಟೋ ಇಂಥ ಎಲ್ಲ ಡಾಕ್ಯುಮೆಂಟ್‌ಗಳನ್ನ ಅಪ್‌ಲೋಡ್ ಮಾಡಬೇಕು.

ಸೆಕ್ಯೂರಿಟಿ ಡಿಪಾಸಿಟ್ ಪಾವತಿ: ₹4,000(ರಿಫಂಡಬಲ್ + ಬಡ್ಡಿರಹಿತ) + ₹500(ಗ್ಯಾಸ್ ಬಳಕೆಗೆ) ದುಡ್ಡು ಕಟ್ಟಬೇಕು. ಹೆಚ್ಚುವರಿ ಪೈಪ್ ಇದ್ದರೆ ಮಾತ್ರ ಅದರ ಚಾರ್ಜ್ ಕಟ್ಟಬೇಕಾಗುತ್ತೆ. ಆದರೆ 10 ಮೀಟರ್‌ವರೆಗೆ ಉಚಿತವಾಗಿ ಹಾಕಿಕೊಡ್ತರೆ.

ಸರ್ವೇ ಇನ್‌ಸ್ಟಾಲೇಷನ್: ತಂಡ ಬರುತ್ತದೆ ಪೈಪ್ ಲೇಯಿಂಗ್ ಮೀಟರ್ ಫಿಟ್ ಸ್ಟವ್ ಅನ್ನುಗೆ ಕನ್ವರ್ಟ್ ಮಾಡಿ ಕೊಡ್ತರೆ. ಬರ್ನರ್‌ಗೆ 50 ರೂಪಾಯಿ ತಗೋಳ್ತರೆ. ಆಮೇಲೆ 1-2 ತಿಂಗಳಲ್ಲಿ ಮನೆಗೆ ಗ್ಯಾಸ್ ಬರುತ್ತೆ. ಪ್ರತಿ 2 ತಿಂಗಳಿಗೊಮ್ಮೆ ನಾವು ಎಷ್ಟು ಬಳಕೆ ಮಾಡಿರ್ತಿವಿ ಅದರಂತೆ ಆನ್‌ಲೈನ್ ಆಪ್ ಬಳಸಿ ಬಿಲ್ ಕಟ್ಟಬಹುದು.

ಟೋಲ್ ಫ್ರೀ ನಂಬರ 1800-102-9282 (ಮಾಹಿತಿ/ಸಹಾಯಕ್ಕೆ ಕರೆ ಮಾಡಿ). ಅಪಾರ್ಟ್‌ಮೆಂಟ್ ಆಗಿದ್ದರೆ ಸೊಸೈಟಿ ಕಮಿಟಿ ಜತೆ ಮಾತನಾಡಿ, ಬ್ಯಾಚ್ ವೈಸ್ ಅಪ್ಲೈ ಮಾಡಿದರೆ ಬೇಗ ಆಗುತ್ತೆ ಅನ್ನೋದರ ಬಗ್ಗೆ ಸ್ನೇಹಾ ಮಾಹಿತಿ ನೀಡಿದರು.

ಸೌರ ಒಲೆ

ಸೌರ ಒಲೆ ಅಥವಾ ಕುಕ್ಕರ್‌ಗಳಲ್ಲಿ ಸೂರ್ಯನ ಬೆಳಕನ್ನು ಬಳಸಿಕೊಂಡು ಸಂಪೂರ್ಣವಾಗಿ ಗ್ಯಾಸ್ ಇಲ್ಲದೇ ಅಡುಗೆ ಮಾಡಬಹುದು. ಒಮ್ಮೆ ಅದನ್ನು ಹಾಕಿಸಿಕೊಂಡರೆ, ಅದಕ್ಕೆ ಕರೆಂಟ್(ವಿದ್ಯುತ್) ಅಥವಾ ಗ್ಯಾಸ್ ಯಾವುದೂ ಬೇಕಾಗಿಲ್ಲ. ಜತೆಗೆ ಇದು ಪರಿಸರ ಸ್ನೇಹಿಯಾಗಿಯೂ ಇರುತ್ತದೆ. ಹಣಕ್ಕೆ ತಕ್ಕಂತೆ ಸೌಲಭ್ಯಗಳಿದ್ದು ಬಳಕೆಗೂ ಬರುತ್ತದೆ.

ಅನ್ನ, ತರಕಾರಿಗಳಂತಹ ಹಲವು ಪದಾರ್ಥಗಳನ್ನು ಸೂರ್ಯನ ಶಾಖದಿಂದಲೇ ಬೇಯಿಸಬಹುದು. ಆದರೆ ಮಳೆಗಾಲದಲ್ಲಿ ಸ್ವಲ್ಪ ಸಮಸ್ಯೆ ಎದುರಾಗಬಹುದು. ಆದರೆ ಸೌರ ಕುಕ್ಕರ್‌ಗಳು ನಿಜವಾಗಿಯೂ ದೀರ್ಘಕಾಲದವರೆಗೂ ಪರ್ಯಾಯವಾಗಿ ಬಳಸಬಹುದು.

ಸೌರಶಕ್ತಿ ಒಲೆಗಳು(/) ಆನ್‌ಲೈನ್ ಮಾರುಕಟ್ಟೆಗಳಾದ . ಮತ್ತು ನಲ್ಲಿ ಸಿಗುತ್ತವೆ. ಅಲ್ಲದೆ, ಸ್ಥಳೀಯ ಸೋಲಾರ್ ಉತ್ಪನ್ನ ಮಾರಾಟಗಾರರು( ) ಮತ್ತು (ಸೂರ್ಯ ನೂತನ) ಅಧಿಕೃತ ಮಾರಾಟಗಾರರಿಂದ ಇಂಡೋರ್ ಸೋಲಾರ್ ಕುಕ್ಕರ್ ಖರೀದಿಸಬಹುದು. ಉದಾಹರಣೆಗೆ: , - ಗಳು ಸಿಗುತ್ತವೆ.

ಜೈವಿಕ ಅನಿಲ ವ್ಯವಸ್ಥೆಗಳು

ಹಿತ್ತಲಲ್ಲಿ ಗುಂಡಿ ಮಾಡಿ, ಅದರಲ್ಲಿ ಸಗಣಿ, ಕೊಳೆತ ತರಕಾರಿ ಎಲ್ಲನೂ ಹಾಕಿ ತಯಾರಿಸುವುದೇ ಗೋಬರ್ ಗ್ಯಾಸ್. ನೈಸರ್ಗಿಕ ಹಸಿರು ಅನಿಲ ಎಂದೂ ಕರೆಯಲಾಗುತ್ತದೆ. ಇದನ್ನು ಮನೆಯ ತ್ಯಾಜ್ಯಗಳು, ಸಗಣಿ ಹಾಕಿ ಸಣ್ಣದಾಗಿ ಮನೆಯಲ್ಲೇ ಗ್ಯಾಸ್ ತಯಾರು ಮಾಡಿಕೋಬಹುದು. ಇದನ್ನು ಜೈವಿಕ ಇಂಧನ ಅಂತ ಹೇಳಲಾಗುತ್ತದೆ. ಇದನ್ನು ನಗರಗಳಲ್ಲಿ ಎಲ್ಲರ ಮನೆಯಲ್ಲಿ ಮಾಡೋಕೆ ಆಗಲ್ಲ. ಯಾಕಂದ್ರೆ ಅಷ್ಟು ಪ್ರಮಾಣದಲ್ಲಿ ತ್ಯಾಜ್ಯ ಸಿಗ್ದೇ ಇರೋದ್ರಿಂದ ಇದು ಕಷ್ಟ ಆಗಬಹುದು. ಆದ್ರೆ ಹಳ್ಳಿಗಳಲ್ಲಿ ತುಂಬಾ ಅನುಕೂಲ ಆಗುತ್ತೆ.

ಸಾಂಪ್ರದಾಯಿಕ ಒಲೆಗಳು

ಸಾಂಪ್ರದಾಯಿಕ ಒಲೆಗಳು ಅಂದರೆ, ಸೌದೆ ಬಳಸಿ ಅಡುಗೆ ಮಾಡಬಹುದಾದ ಒಲೆಗಳು. ಮೊದಲೆಲ್ಲ ಮನೆಗಳಲ್ಲಿ ಮಣ್ಣಿಂದ ಕಟ್ಟೆ ಥರ ಮಾಡಿ ಅದರಲ್ಲಿ ಕುಪ್ಪುಗಳನ್ನು ಇಟ್ಟ ಅದರ ಮೇಲೆ ಪಾತ್ರೆ ಇಟ್ಟದ್ರೆ ಸುತ್ತಲೂ ಉರಿ ಹೋಗ್ತಿತ್ತು. ಬೇಗ ಕಾವು ಆಗ್ತಿತ್ತು. ಈಗಲೂ ಹಲವು ಮನೆಗಳಲ್ಲಿ ತಾತ್ಕಾಲಿಕವಾಗಿ ಸೌದೆ ಒಲೆ ಬಳಕೆ ಮಾಡ್ತಿದ್ದಾರೆ. ಈ ಕಾಲಕ್ಕೆ ತಕ್ಕಂತೆ ಬೇರೆ ಬೇರೆ ರೀತಿಯ ಸೌದೆ ಒಲೆಗಳು ಮಾರುಕಟ್ಟೆಗಳಲ್ಲಿ ಸಿಗ್ತವೆ. ಕಬ್ಬಿಣದ ಒಲೆ, ತಗಡಿನ ಒಲೆ, ಬಕೆಟ್ ಆಕಾರದ ಒಲೆ, ಕೊಳವೆ ಒಲೆ ಹೀಗೆ ಹಲವು ರೀತಿಲ್ಲಿರುವ ಒಲೆಗಳಿವೆ. ಅದಕ್ಕೆ ಸೌದೆ ಹಾಕಬಹುದು, ಬೂದಿ ಬೀಳೋದಕ್ಕೂ ಜಾಗ ಮಾಡಿದಾರೆ. ಅದರಲ್ಲಿ ಆರಾಮಾಗೆ ಸೌದೆ ಬಳಸಿ ಅಡುಗೆ ಮಾಡಿಕೊಳ್ಳಬಹುದು.

ಸೌದೆ ಡಿಪೊಗಳಲ್ಲಿ ಸೌದೆ ತರಬಹುದು. ಒಂದು ಮಣ ಸೌದೆ(1012 ಕೆ.ಜಿ) ₹110₹120ರಂತೆ ಮಾರಾಟ ಆಗುತ್ತೆ. ಹೋಟೆಲ್ ವರ್ತಕರು, ಶುಭ ಸಮಾರಂಭಗಳ ಆಯೋಜಕರು ಟನ್ ಲೆಕ್ಕದಲ್ಲಿ ತಗೊಂಡು ಬರ್ತಾರೆ. ನ್ಯಾಚುರಲ್ ಅಡುಗೆ ಬೇಕು ಎನ್ನುವ ಗ್ರಾಹಕರಿಗೆ ಸೌದೆ ಒಲೆಯಲ್ಲೇ ಅಡುಗೆ ಮಾಡಿ ಕೊಡ್ತರೆ. ಹಾಗೇನೆ ನಾವೂ ಕೂಡ ಸೌದೆ ಡಿಪೋದಿಂದ ಸೌದೆ ತಂದುಕೊಂಡ್ರೆ, ಸೌದೆ ಒಲೆನೆ ಬಳಸಬಹುದು.. ಅಲ್ವ ಎಂದ ಸ್ನೇಹ ನಗರ ಪ್ರದೇಶಗಳಲ್ಲಿ ಹೇಗೆ ಸೌದೆ ಒಲೆಗಳನ್ನು ಬಳಸಬಹುದು ಎಂಬುದರ ಬಗ್ಗೆ ತಿಳಿಸಿದ್ದಾರೆ.

ಪೆಲೆಟ್ ಒಲೆ ಬಳಕೆ

ಅರುಣ್ ಜಾವಗಲ್ ಅವರು ಸೋಷಿಯಲ್ ಮೀಡಿಯಾದಲ್ಲಿ, ಸುಮಾರು 12 ವರ್ಷದ ಹಿಂದೆ ಹೋಟೆಲ್ ಉದ್ಯಮ ನಡೆಸುತ್ತಿದ್ದೆ. ಪ್ರತಿದಿನ 2-3 ಸಿಲಿಂಡರ್‌ಗಳು ಬೇಕಾಗುತ್ತಿದ್ದವು. ಬಳಕೆ ಕಡಿಮೆ ಮಾಡುವ ಉದ್ದೇಶದಿಂದ ಬೇರೆ ದಾರಿ ಹುಡುಕುತ್ತಿದ್ದಾಗ ಕಂಡಿದ್ದು ಪೆಲೆಟ್ ಒಲೆಗಳು. ಪೆಲೆಟ್‌ಗಳನ್ನು ಕಡಲೇ ಸಿಪ್ಪೆಯಿಂದ ತಯಾರು ಮಾಡುತ್ತಾರೆ. ಬೆಂಗಳೂರು ಸುತ್ತಮುತ್ತ ಅನೇಕ ಕಾರ್ಖಾನೆಗಳಿಂದ ಪೆಲೆಟ್‌ಗಳು ಸುಲಭವಾಗಿ ಸಿಗುತ್ತಿದ್ದವು. ಪೆಲೆಟ್ ಒಲೆಯ ಬಳಕೆಯಿಂದಾಗಿ ಬಳಕೆ ತುಂಬಾ ಕಡಿಮೆಯಾಯಿತು ಎಂದಿದ್ದಾರೆ.

ಪೆಲೆಟ್ ಒಲೆ ಹಚ್ಚುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಒಲೆ ಹಚ್ಚಿದ ಮೇಲೆ ಉರಿ ಕಡಿಮೆ ಜಾಸ್ತಿ ಮಾಡೋದಕ್ಕೆ ಸಾಧ್ಯವಿರುತ್ತದೆ. ನಿಲ್ಲಿಸೋಕ್ಕೆ ಸಾಧ್ಯವಿರಲ್ಲ. ಹಾಗಾಗಿ ಒಲೆ ಉರಿಯುವವರೆಗೆ ಪದಾರ್ಥಗಳ ತಯಾರಿಕೆಗೆ ಪ್ಲ್ಯಾನ್ ಮಾಡವುದೊಳಿತು ಎಂದು ಬರೆದುಕೊಂಡಿದ್ದಾರೆ.

ಮೊಳಕೆ ಸಲಾಡ್‌ಗಳು: ಹೆಸರುಕಾಳು ಅಥವಾ ಕಡಲೆ ಕಾಳುಗಳನ್ನು ನೆನೆಸಿ ರೆಫ್ರಿಜರೇಟರ್‌ನಲ್ಲಿ ಇಟ್ಟುಕೊಂಡಿದ್ದರೆ, ಅವುಗಳನ್ನು ಟೊಮೆಟೊ, ಸೌತೆಕಾಯಿ, ನಿಂಬೆ ಮತ್ತು ಚಾಟ್ ಮಸಾಲಾದೊಂದಿಗೆ ಬೆರೆಸಿ ತಿಂದರೆ ಊಟ ಬೇಕು ಅನ್ನೋದೇ ಇಲ್ಲ. ಅಷ್ಟಕ್ಕೇ ಹೊಟ್ಟೆ ಭರ್ತಿಯಾಗುತ್ತದೆ ಆರೋಗ್ಯಕರವಾಗಿಯೂ ಇರುತ್ತೆ.

ಕಡಲೆಕಾಯಿ ಚಾಟ್: ಒಂದು ಹಿಡಿ ಹುರಿದ ಕಡಲೆ ಬೀಜವನ್ನು ಸಣ್ಣಗೆ ಹೆಚ್ಚಿದ ತರಕಾರಿಗಳೊಂದಿಗೆ ಬೆರೆಸಿ ತಿನ್ನಿ. ಒಳ್ಳೆ ಪ್ರೋಟೀನ್ ಭರಿತ ಊಟವೂ ಸಿಕ್ಕಂತಾಗುತ್ತದೆ. ಇದಕ್ಕೆ ಯಾವುದೇ ರೀತಿಯ ಗ್ಯಾಸ್ ಆಗಲೀ ಬೇಯಿಸೋದಾಗಲಿ ಏನೂ ಬೇಡ. ಈಗೆಲ್ಲ ಡಯಟ್ ಅದೂ ಇದೂ ಅಂತ ಮಾಡೋದ್ರಿಂದ ಇದಿನ್ನೂ ಅನುಕೂಲ ಆಗುತ್ತೆ.

ನಗರ ಪ್ರದೇಶಗಳಲ್ಲಿ ಅಡುಗೆ ಮಾಡುವುದಕ್ಕೆ ಎಲ್‌ಪಿಜಿ ಸಿಲಿಂಡರ್ ಉತ್ತಮ ಆಯ್ಕೆ. ಆದರೆ ಯುದ್ಧ ಅಥವಾ ಇನ್ನಿತರ ಅವಘಡಗಳು ಸಂಭವಿಸಿದಾಗ ಎಲ್‌ಪಿಜಿ ಸಿಲಿಂಡರ್ ಸಿಗುವುದು ಕಷ್ಟ ಅನಿಸಿದಾಗ, ನಾವು ಕೈ ಚೆಲ್ಲಿ ಕೂರಬೇಕಾಗಿಲ್ಲ. ಮೇಲೆ ತಿಳಿಸಿದ ಪರ್ಯಾಯ ಮಾರ್ಗಗಳತ್ತ ನೋಡಬಹುದು. ನಮ್ಮ ಅನುಕೂಲಕ್ಕೆ ಸಿಗುವುದನ್ನು ಬಳಸಬಹುದು. ಸದ್ಯದ ಸಮಸ್ಯೆಯಿಂದ ಪಾರಾಗಬಹುದು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR